
ಪ್ರಸಿದ್ಧ ಜ್ಯೋತಿಷ್ಯ ಪಂಡಿತರು
ಉಚಿತವಾಗಿ ಭವಿಷ್ಯ, ಸಲಹೆ ತಿಳಿಯಲು ಮತ್ತು ಸಮಸ್ಯೆಗೆ ಶಾಶ್ವತ ಉಚಿತ ಪರಿಹಾರ ಪಡೆಯಲು ಕರೆ ಮಾಡಿ.
ಇಂದೇ ಸಂಪರ್ಕಿಸಿ.
ಎಚ್.ಭೀಮರಾವ್ ವಾಷ್ಟರ್ ಮೊ: 9845309239



# ಅಮರ ಸುಳ್ಯ ಸುದ್ದಿ

ಸುಳ್ಯದ ಜನಪರ ಕನ್ನಡ ವಾರಪತ್ರಿಕೆ

Regd.No.PTR/126/2025-27
Licenced to Post under WPP
No. SK/WPP/PTR/156/2025-27



ಬೇಕಾಗಿದ್ದಾರೆ
ಸುಳ್ಯ ತಾಲೂಕಿನ ವಿವಿಧ ಗ್ರಾಮಗಳಲ್ಲಿ ವರದಿ ಹಾಗೂ ಜಾಹೀರಾತು ಸಂಗ್ರಹಕ್ಕೆ ಜನ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು.
ಕೂಡಲೇ ಸಂಪರ್ಕಿಸಿರಿ
ಅಮರ ಸುಳ್ಯ ಸುದ್ದಿ ವಾರಪತ್ರಿಕೆ
ವಿನಾಯಕ ಕಾಂಪ್ಲೆಕ್ಸ್ ರಥಬೀದಿ ಸುಳ್ಯ
ಮೊ: 8197008744




ಪ್ರಧಾನ ಸಂಪಾದಕರು: ಮುರಳೀಧರ ಅಡ್ಡನಪಾರೆ Email: amarasuddi@gmail.com Website: www.amarasuddi.com

Mob : 9449387044, Off. : 7338248044
Facebook : Amarasullia Suddi

RNI No. KAR KAN / 2012/ 49234 | ಸಂಪುಟ –15 | ಸಂಚಿಕೆ – 42 | 2026 ಮಾ.06 ರಿಂದ ಮಾ.12 | Posted at SULLIA M.D.G. ON 06-03-2026 | ಪುಟ–6 | ಬೆಲೆ: ರೂ. 4.00



All New Collections
ಮಾರ್ಚ್ 1 ರಿಂದ

999/- ರ ಮೇಲೆ ಖರೀದಿಗೆ
Big Customer Big gift
ಬಾಯ್ಸ್ ಶರ್ಟ್ – ₹399ಕ್ಕೆ 3
ಬಾಯ್ಸ್ ಬ್ಯಾಗಿ ಪ್ಯಾಂಟ್ – ₹899ಕ್ಕೆ 2
ಮೆನ್ಸ್ ಶರ್ಟ್ – ₹499ಕ್ಕೆ 3
ಮೆನ್ಸ್ ಬ್ಯಾಗಿ ಟೀ ಶರ್ಟ್ – ₹999ಕ್ಕೆ 3
ಮೆನ್ಸ್ ಬ್ಯಾಗಿ ಪ್ಯಾಂಟ್ – ₹899ಕ್ಕೆ 2
ಮಹಿಳೆಯರ ನೈಟಿ – ₹130 ರಿಂದ ₹200
ಸಾರಿ ಸ್ಕರ್ಟ್ – ₹100 ರಿಂದ ₹150
ಸಾರಿ ಪ್ರಾರಂಭ – ₹79
BEST PRICE GUARANTEE
1 ರೂಪಾಯಿಗೆ ಶರ್ಟ್
1 ರೂಪಾಯಿಗೆ ಸಾರಿ
1 ರೂಪಾಯಿಗೆ ಟಾಪ್
All Branded Items
20% FLAT DISCOUNT
ಇಷ್ಟೆಲ್ಲ ಆಫರ್ ರೊಮ್ಯಾಂಟಿಕ್‌ನಲ್ಲಿ ಮಾತ್ರ
ಎಲ್ಲಾ ರೀತಿಯ ಬಟ್ಟೆಗಳು ಒಂದೇ ಸೂರಿನಡಿಯಲ್ಲಿ
1 ANNIVERSARY
Romantic
The Complete Family Showroom
WEDDING COLLECTION
Car Street, Nandini Tower, Sullia 574239 D.K.
7892003606, 7483203606, 7795030606


## ಸುಳ್ಯ ತಾಲೂಕನ್ನು ಕೇಂದ್ರವನ್ನಾಗಿರಿಸಿ ಮಂಗಳೂರಿಗೆ ಎಲಿಫೆಂಟ್ ಟಾಸ್ಕ್ ಫೋರ್ಸ್ ಮಂಜೂರು ಮಾಡಿದ ರಾಜ್ಯ ಸರ್ಕಾರ



ಶಾಸಕಿ ಭಾಗೀರಥಿ ಮುರುಳ್ಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ನೀಡಿದ ಮನವಿಯಂತೆ ಸುಳ್ಯ ತಾಲೂಕನ್ನು ಕೇಂದ್ರವನ್ನಾಗಿರಿಸಿಕೊಂಡು ದ.ಕ. ಜಿಲ್ಲೆಯ ಮಂಗಳೂರು ವಿಭಾಗಕ್ಕೆ ಹೊಸದಾಗಿ 28 ಮಂದಿಯ ಎಲಿಫೆಂಟ್ ಟಾಸ್ಕ್ ಫೋರ್ಸ್ ಮಂಜೂರು ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಹೊಸ ಕಾರ್ಯಪಡೆಯಲ್ಲಿ ಒಬ್ಬರು ಉಪವಲಯ ಅರಣ್ಯಾಧಿಕಾರಿ, ಎರಡು ಮಂದಿ ಗಸ್ತು ಅರಣ್ಯಪಾಲಕರು, ಹೊರಗುತ್ತಿಗೆಯ ಆಧಾರದಲ್ಲಿ ಇಪ್ಪತ್ತೈದು ಮಂದಿ ವಾಹನ ಚಾಲಕರು ಸೇರಿದಂತೆ ಒಟ್ಟು 28 ಮಂದಿ ಇರಲಿದ್ದಾರೆ.

ಈ ಟಾಸ್ಕ್ ಫೋರ್ಸ್ ತಂಡದ ಕೇಂದ್ರಸ್ಥಾನ ಸುಳ್ಯವಾಗಿರಲಿದ್ದು, ಆನೆ ಕಾರ್ಯಪಡೆಯು ಉಪ ಅರಣ್ಯ ಸಂರಕ್ಷರಣಾಧಿಕಾರಿ 4 »

## ಸುಳ್ಯ ಕ್ಷೇತ್ರಕ್ಕೆ ಆನೆ ಕಂದಕ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ 44 ಲಕ್ಷ ಅನುದಾನ ಬಿಡುಗಡೆ

## ಸುಳ್ಯದಲ್ಲಿ ಎರಡು ದಿನಗಳ ಕಾಲ ಮೇಳೈಸಿದ ಮೊಗೇರ ದುಡಿ ಆಯನ ರಾಜ್ಯ ಸಮ್ಮೇಳನ

### ತುಳುನಾಡಿನ ಸಂಸ್ಕೃತಿ ಪರಂಪರೆಯಲ್ಲಿ ಮೊಗೇರ ಸಮುದಾಯದ ಪಾತ್ರ ಹಿರಿದಾದುದು: ಕ್ಯಾ.ಚೌಟ



ಅವಿಭಜಿತ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನೊಳಗೊಂಡ ತುಳುನಾಡಿನ ಮಣ್ಣಿನ ಸಂಸ್ಕೃತಿ – ಪರಂಪರೆ, ಆಚಾರ – ವಿಚಾರಗಳಲ್ಲಿ ಮೊಗೇರ ಸಮುದಾಯದ ಕೊಡುಗೆ ಹಿರಿದಾದುದು ಎಂದು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಹೇಳಿದರು.

ಅವರು ಕರ್ನಾಟಕ ರಾಜ್ಯ ಮೊಗೇರ ಸಂಘದ ನೇತೃತ್ವದಲ್ಲಿ ಮೊಗೇರ ದುಡಿ ಆಯನ ರಾಜ್ಯ ಸಮ್ಮೇಳನದ ಪ್ರಯುಕ್ತ ಸುಳ್ಯದ ಕೊಡಿಯಾಲಬೈಲಿನಲ್ಲಿರುವ ಗೌಡ ಸಮುದಾಯಭವನದಲ್ಲಿ ಮಾ.1ರಂದು ನಡೆದ ಬಹಿರಂಗ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.

ಮೊಗೇರ ಸಮುದಾಯದವರು ಬಡವರಾಗಿದ್ದರೂ ತುಳುನಾಡಿಗೆ ತನ್ನದೇ ರೀತಿಯಲ್ಲಿ ಕೊಡುಗೆ ನೀಡಿದ ಸಮುದಾಯ ಎಂದು ಕ್ಯಾಪ್ಟನ್ ಬ್ರಿಜೇಶ್ ಚೌಟರು ಹೇಳಿದರು.

ಫೆ.28ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಮೊಗೇರ ಸಂಘದ ರಾಜ್ಯಾಧ್ಯಕ್ಷ ನಂದರಾಜ್ ಸಂಕೇಶ ಅವರು ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಶಿಕ್ಷಣ ಸಂಯೋಜಕರಾದ ಕೇಶವ ಮಾಸ್ಟರ್ ಹೊಸಗದ್ದೆ ಅವರು ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮವನ್ನು ಮೊಗೇರ ಸಂಘದ ಸ್ಥಾಪಕ ಸದಸ್ಯ ಶುಭೋದಯ ಕೂಡ್ಲು ಅವರು ಉದ್ಘಾಟಿಸಿ, ಶುಭಹಾರೈಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ. ಅಭಯಕುಮಾರ್ ಅವರು ದಿಕ್ಸೂಚಿ ಭಾಷಣ ಮಾಡಿ ಮೊಗೇರ ಸಮುದಾಯದ ಕುರಿತು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಹಂಪಿ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ. ಮಾದವ ಪೆರಾಜೆ, ದ.ಕ.ಜಿ.ಪಂ. ಮಾಜಿ ಅಧ್ಯಕ್ಷೆ ಶ್ರೀಮತಿ ಮೀನಾಕ್ಷಿ ಶಾಂತಿಗೋಡು, ಕೊಡಗು ಜಿ.ಪಂ. ಮಾಜಿ ಅಧ್ಯಕ್ಷ ಶಿವಪ್ಪ ಬಿ., ಪೊಲೀಸ್ ಉಪನಿರೀಕ್ಷಕ ನರೇಂದ್ರ ಸೂಟರ್ ಪೇಟೆ, ತುಳು ಅಕಾಡೆಮಿ ಮಾಜಿ ಸದಸ್ಯ ಪಿ.ಎಂ. ರವಿ, ಸುಳ್ಯ ಮೊಗೇರ ಸಂಘದ ಸ್ಥಾಪಕ ದಾಸಪ್ಪ ಪಲ್ಲತ್ತಡ್ಕ 4 »

### ತುಳುನಾಡಿನ ದೈವಾರಾಧನೆಯಲ್ಲಿ ಮೊಗೇರ ಸಮುದಾಯದ ಪಾತ್ರ ಹಿರಿದು: ಮಾಜಿ ಸಚಿವ ಎಸ್. ಅಂಗಾರ

ತುಳುನಾಡಿನ ದೈವರಾಧನೆಯಲ್ಲಿ ಮೊಗೇರ ಸಮುದಾಯದ ಪಾತ್ರ ಹಿರಿದಾಗಿದೆ. ನಮ್ಮ ಸಮುದಾಯವರಿಗೆ ದೈವ– ದೇವರುಗಳು ಸಿಕ್ಕಿದ ಉದಾಹರಣೆ ತುಳುನಾಡಿನಲ್ಲಿ ಬಹಳಷ್ಟಿದೆ. ಮೊಗೇರ ಸಮುದಾಯದವರು ಸರ್ಕಾರದ ಸವಲತ್ತುಗಳಿಗಾಗಿಯೇ ಕಾಯದೆ ಸ್ವಶಕ್ತಿಯಿಂದ ಸ್ವಾವಲಂಬಿಗಳಾಗಿ ಬದುಕಬೇಕು ಎಂದು ರಾಜ್ಯ ಮೀನುಗಾರಿ ಮತ್ತು ಒಳನಾಡು ಜಲಸಾರಿಗೆ ಮಾಜಿ ಸಚಿವರು ಹಾಗೂ ಮೊಗೇರ ದುಡಿ ಆಯನದ ಗೌರವಾಧ್ಯಕ್ಷರಾದ ಎಸ್. ಅಂಗಾರ ಅವರು ಹೇಳಿದರು.

### ಸಮುದಾಯದ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿ: ಶಾಸಕಿ ಭಾಗೀರಥಿ

ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕಿ ಭಾಗೀರಥಿ ಅವರು ನಮ್ಮ ಸಮುದಾಯ ಬಡ ಸಮುದಾಯ. ಆದರೆ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸಕ್ಕೆ ಒತ್ತು ನೀಡಿ. ಗುಣಮಟ್ಟದ ಶಿಕ್ಷಣದಿಂದಾಗಿ ಮಕ್ಕಳು ಮುಂದೊಂದು ದಿನ ಸಮಾಜದಲ್ಲಿ ಉತ್ತಮ ಪ್ರಜೆಗಳಾಗುತ್ತಾರೆ. ಬೇರೆಯವರ ಮನೆಯಲ್ಲಿ ಕೃಷಿ ಕೂಲಿ ಕೆಲಸ ಮಾಡಿದ ನಮ್ಮ ಹಿರಿಯರು ಈಗಲೂ ಬಡವರಾಗಿಯೇ ಉಳಿದಿದ್ದಾರೆ ಆದ್ದರಿಂದ ಮುಂದಿನ ಮಕ್ಕಳಿಗಾದರೂ ಉತ್ತಮ ಶಿಕ್ಷಣ ನೀಡಿ ಎಂದು ಹೇಳಿದರು.

## ಅಡ್ಕಾರು ಅಂಜನಾದ್ರಿ ಶ್ರೀ ಆಂಜನೇಯನ ಕ್ಷೇತ್ರದಲ್ಲಿ ಚೈತನ್ಯ ಬ್ರಹ್ಮಕಲಶೋತ್ಸವ ಆರಂಭ

### ಫೆ.6: ಶ್ರೀ ಕರಿಚಾಮುಂಡಿ ದೈವದ ಪ್ರತಿಷ್ಠೆ–ಶ್ರೀ ಪ್ರಸನ್ನಾಂಜನೇಯ ಸ್ವಾಮಿಗೆ ಬ್ರಹ್ಮಕಲಶಾಭಿಷೇಕ






ಜಾಲ್ಸೂರು ಗ್ರಾಮದ ಅಡ್ಕಾರಿನ ಅಂಜನಾದ್ರಿ ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಕ್ಷೇತ್ರದಲ್ಲಿ ಶ್ರೀ ಪ್ರಸನ್ನಾಂಜನೇಯ ಸ್ವಾಮಿಗೆ ಚೈತನ್ಯ ಬ್ರಹ್ಮಕಲಶೋತ್ಸವದ ಪ್ರಯುಕ್ತ ಮಾ.4ರಂದು ಬೆಳಿಗ್ಗೆ ಹಸಿರುವಾಣಿ ಸಮರ್ಪಣೆ ಹಾಗೂ ಉಗ್ರಾಣ ಮುಹೂರ್ತದೊಂದಿಗೆ ಜಾತ್ರೋತ್ಸವವು ಆರಂಭಗೊಂಡಿದೆ.

ಶ್ರೀ ಪ್ರಸನ್ನಾಂಜನೇಯ ಸ್ವಾಮಿಗೆ ಚೈತನ್ಯ ಬ್ರಹ್ಮಕಲಶೋತ್ಸವ, ಶ್ರೀ ಕರಿಚಾಮುಂಡಿ ದೈವದ ಪ್ರತಿಷ್ಠೆ, ಸಾರ್ವಜನಿಕ ಶ್ರೀ ಚಂಡಿಕಾ ಮಹಾಯಾಗ ಹಾಗೂ ಕಾಲಾವಧಿ ಜಾತ್ರೋತ್ಸವ , ಶ್ರೀ ಗುಳಿಗ ದೈವಕ್ಕೆ ಕೋಲ ಸಮರ್ಪಣೆ ಹಾಗೂ 48 ಗಂಟೆಗಳ ಅಖಂಡ ಭಜನಾ ಕಾರ್ಯಕ್ರಮವು ಮಾ.4ರಿಂದ ಮಾ.9ರ ತನಕ ಜರುಗಲಿದೆ. 4 »



ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಕ್ಷೇತ್ರ ಅಂಜನಾದ್ರಿ (ಮಾಯಿಲಕೋಟೆ)

ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಸೇವಾ ಟ್ರಸ್ಟ್ ಅಂಜನಾದ್ರಿ (ರಿ.)
SLY -400091/2014-15
ಅಡ್ಕಾರು, ಜಾಲ್ಸೂರು ಸುಳ್ಯ ತಾಲೂಕು, ದ.ಕ – 574239

ಬ್ರಹ್ಮಶ್ರೀ ವೇ.ಮೂ.ಪುರೋಹಿತ ನಾಗರಾಜ ಭಟ್ ಸುಳ್ಯ ಇವರ ಮಾರ್ಗದರ್ಶನದಲ್ಲಿ
ಶ್ರೀ ಪ್ರಸನ್ನಾಂಜನೇಯ ಸ್ವಾಮಿಗೆ
ಚೈತನ್ಯ ಬ್ರಹ್ಮಕಲಶೋತ್ಸವ

ಶ್ರೀ ಕರಿಚಾಮುಂಡಿ ದೈವದ ಪ್ರತಿಷ್ಠೆ
ಸಾರ್ವಜನಿಕ ಚಂಡಿಕಾ ಮಹಾಯಾಗ
ಮತ್ತು
ಕಾಲಾವಧಿ ಜಾತ್ರೋತ್ಸವ
ಗುಳಿಗ ದೈವಕ್ಕೆ ಕೋಲ ಸಮರ್ಪಣೆ ಹಾಗೂ 48 ಗಂಟೆಗಳ ಅಖಂಡ ಭಜನಾ ಕಾರ್ಯಕ್ರಮಗಳು
ದಿನಾಂಕ 04–03–2026ನೇ ಬುಧವಾರದಿಂದ 09–03–2026ನೇ ಸೋಮವಾರದ ತನಕ

ಕಾರ್ಯಕ್ರಮದ ವಿವರ
ದಿನಾಂಕ 04.03.2026ನೇ ಬುಧವಾರ ಬೆಳಿಗ್ಗೆ ಗಂಟೆ 8.00ಕ್ಕೆ ಗಣಪತಿ ಹವನ, ನಾಗ ತಂಬಿಲ, ಪೂ.ಗಂ 11.00ಕ್ಕೆ ಉಗ್ರಾಣ ಮುಹೂರ್ತ, ಹಸಿರುವಾಣಿ ಸಮರ್ಪಣೆ, ಮ.ಗಂ. 1.00ಕ್ಕೆ ಶ್ರೀ ದೇವರಿಗೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂ.ಗಂ 4.00ಕ್ಕೆ ತಂತ್ರಿಗಳ ಹಾಗೂ ವೈದಿಕರ ಆಗಮನ, ಪೂರ್ಣಕುಂಭ ಸ್ವಾಗತ. ಸಂ.ಗಂ 6.00ರಿಂದ ಸ್ವಸ್ತಿ ಪುಣ್ಯಾಹ, ಸ್ಥಳ ಶುದ್ಧಿ, ಪಂಚಗವ್ಯ, ದೀಪಾರಾಧನೆ, ಸಾಮೂಹಿಕ ಪ್ರಾರ್ಥನೆ, ಋತ್ವಿಗರಣೆ ಸುದರ್ಶನ ಹವನ, ಬಾಧಾಕರ್ಷಣೆ, ಅಘೋರ ಬಲಿ ವಗೈರೆ.
ದಿನಾಂಕ 05.03.2026ನೇ ಗುರುವಾರ ಬೆ.ಗಂ 8.00ರಿಂದ ತಿಲಹವನ 12 ತೆಂಗಿನಕಾಯಿಗಳ ಗಣಪತಿ ಹವನ, ಭಾಗ್ಯಸೂಕ್ತ ಹವನ, ಪವಮಾನ ಹವನ, ಐಕ್ಯಮತ್ಯ ಹವನ, ನವಗ್ರಹ ಶಾಂತಿ., ಮ.ಗಂ 1.00ಕ್ಕೆ ಶ್ರೀ ದೇವರಿಗೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂ.ಗಂ 6.00ರಿಂದ ವಾಸ್ತು ಪೂಜಾ, ವಾಸ್ತು ಬಲಿ, ರಾಕ್ಷೋಘ್ನ ಹವನ, ಅಧಿವಾಸಾಂಗ ಹವನ, ಬಿಂಬಶುದ್ಧಿ, ಕಲಶಪೂರಣೆ, ನವಚಂಡಿಕಾ ಕಲಶ ಪ್ರತಿಷ್ಠೆ, ಚಂಡಿಕಾ, ಪಾರಾಯಣ, ಆಶ್ಲೇಷಾ ಬಲಿ, ಆಶ್ಲೇಷಾ ಬಲಿ ಹವನ, ಸಂ.ಗಂ 6.30ರಿಂದ ಸಾಂಸ್ಕೃತಿಕ ವೈಭವ (ಸ್ಥಳೀಯ ಪ್ರತಿಭೆಗಳಿಂದ ವಿವಿಧ ವಿನೋದಾವಳಿಗಳು), ಸಂ.ಗಂಟೆ 7.30ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ, ರಾತ್ರಿ ಗಂಟೆ 9.00ರಿಂದ ಶ್ರೀ ದೇವರಿಗೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಾಂಸ್ಕೃತಿಕ ಕಾರ್ಯಕ್ರಮ ಮುಂದುವರಿಯುವುದು.
ದಿನಾಂಕ 06.03.2026ನೇ ಶುಕ್ರವಾರ ಬೆ.ಗಂ. 5.00ರಿಂದ ಶ್ರೀ ಗಣಪತಿ ಹವನ, ಪ್ರತಿಷ್ಠಾಂಗ ಹವನ, ಬೆ.ಗಂ 7.00ರ ಮೀನ ಲಗ್ನದಲ್ಲಿ ಶ್ರೀ ಕರಿಚಾಮುಂಡಿ ದೈವದ ಪ್ರತಿಷ್ಠೆ, ಕಲಶಾಭಿಷೇಕ ಗುಳಿಗ ಸನ್ನಿಧಿ ಹಾಗೂ ಕರಿಚಾಮುಂಡಿ ಸನ್ನಿಧಿಯಲ್ಲಿ ದೇವಕ್ರಿಯಾ ತಂಬಿಲ ಸಮರ್ಪಣೆ, ಬೆ.ಗಂ. 8.30ರಿಂದ ಶ್ರೀ ಮಹಾಗಣಪತಿ ಸಹಿತ ಚಂಡಿಕಾ ಮಹಾಯಾಗ ಪಾರಂಭ ಯಾಗಶಾಲಾ ಪ್ರವೇಶ, ಅಗ್ನಿ ಪ್ರತಿಷ್ಠೆ. (ಸಂಪೂರ್ಣ ಸಹಕಾರ ಶ್ರೀ ಕೇಶವಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನ ಸುಳ್ಯ(ರಿ.), ಬೆ.ಗಂ.10.00ರಿಂದ ಸಹಸ್ರ ಮಾತೆಯರಿಂದ ಸಹಸ್ರಕಂಠ ಲಲಿತಾಸಹಸ್ರನಾಮ ಪಾರಾಯಣ, ಪೂ.ಗಂ.10.43ರ ವೃಷಭ ಲಗ್ನ ಸುಮುಹೂರ್ತದಲ್ಲಿ ಮಂಗಲದರ್ಶನ ಶ್ರೀ ಪ್ರಸನ್ನಾಂಜನೇಯ ಸ್ವಾಮಿಗೆ ಚೈತನ್ಯ ಬ್ರಹ್ಮಕಲಶಾಭಿಷೇಕ, ಸಿಯಾಳಭಿಷೇಕ, ಮ.ಗಂ.12.30 ವಸೋರ್ಧಾರಾ ಸಹಿತ ಚಂಡಿಕಾ ಮಹಾಯಾಗದ ಪೂರ್ಣಾಹುತಿ, ಮ.ಗಂ 1.00 ರಿಂದ ಶ್ರೀ ದೇವರಿಗೆ ಅಲಂಕಾರ ಸಹಿತ ಮಹಾಪೂಜೆ ನಂತರ ಪ್ರಸಾದ ವಿತರಣೆ, ಬ್ರಹ್ಮ ಸಂತರ್ಪಣೆ, ಅನ್ನಸಂತರ್ಪಣೆ, ರಾ.ಗಂ 7.30ರಿಂದ ಗುಳಿಗ ದೈವದ ಭಂಡಾರ ತೆಗೆಯುವುದು, ರಾ.ಗಂ 8.30ರಿಂದ ಶ್ರೀ ದೇವರಿಗೆ ರಂಗಪೂಜೆ, ಶ್ರೀ ದೇವರ ಬಲಿ ಹೊರಟು ಉತ್ಸವ, ಶ್ರೀಭೂತಬಲಿ, ಕಟ್ಟೆಪೂಜೆ, ಶ್ರೀ ದರ್ಶನ ಬಲಿ, ದೈವ ದೇವರ ಭೇಟಿ, ಬಟ್ಟಲು ಕಾಣಿಕೆ, ಶ್ರೀ ಮುಡಿ ಗಂಧ ಪ್ರಸಾದ.
ದಿನಾಂಕ 07–03–2026ನೇ ಶನಿವಾರ ಬೆ.ಗಂ.6.00ರಿಂದ ಶ್ರೀ ದೇವರಿಗೆ ಉಷಃ ಪೂಜಾ, ಬೆ.ಗಂ.6.45ರಿಂದ ಸೂರ್ಯೋದಯದಿಂದ 48 ಘಂಟೆಗಳ ಅಖಂಡ ಭಜನಾ ಕಾರ್ಯಕ್ರಮ ಪ್ರಾರಂಭ ದೀಪ ಪ್ರತಿಷ್ಠೆ, ಬೆ.ಗಂ.8.00ರಿಂದ ಶ್ರೀ ದೇವರಿಗೆ ನವಕ ಕಲಶಾಭಿಷೇಕ, ಎಳನೀರು ಅಭಿಷೇಕ, ಮ.ಗಂ.1.00ಕ್ಕೆ ಶ್ರೀ ದೇವರಿಗೆ ಮಹಾಪೂಜೆ, ಸಂಪ್ರೋಕ್ಷಣ ಮಂತ್ರಾಕ್ಷತೆ, ಅನ್ನಸಂತರ್ಪಣೆ, ಸಂ.ಗಂ 6.00ಕ್ಕೆ ಸಾಯಂಕಾಲ ಪೂಜಾ, ರಾ.ಗಂ 9.00ಕ್ಕೆ ರಾತ್ರಿ ಪೂಜೆ, ನಿರ್ಮಾಲ್ಯ ವಿಸರ್ಜನೆ.
ದಿನಾಂಕ 08–03–2026ನೇ ಭಾನುವಾರ ಬೆ.ಗಂ 7.00ಕ್ಕೆ ಉಷಃ ಪೂಜಾ, ಮ.ಗಂ 1.00ಕ್ಕೆ ಮಹಾಪೂಜೆ, ಸಂ.ಗಂ 6.00ಕ್ಕೆ ಸಾಯಂಕಾಲ ಪೂಜೆ, ರಾ.ಗಂ 9.00ಕ್ಕೆ ರಾತ್ರಿ ಪೂಜೆ, ನಿರ್ಮಾಲ್ಯ ವಿಸರ್ಜನೆ.
ದಿನಾಂಕ 09–03–2026ನೇ ಸೋಮವಾರ ಬೆ.ಗಂ. 6.00ಕ್ಕೆ ಉಷಃ ಪೂಜಾ, ಬೆ.ಗಂ 6.46ರ ಸೂರ್ಯೋದಯಕ್ಕೆ ಭಜನಾ ಮಂಗಳಂ ದೀಪ ವಿಸರ್ಜನೆ, ಮಂಗಳ ಪ್ರಸಾದ ವಿತರಣೆ.
ದಿನಾಂಕ 7.03.2026ನೇ ಶನಿವಾರ ಬೆ.ಗಂ 6.45ರಿಂದ ದಿನಾಂಕ 9.03.2026ನೇ ಸೋಮವಾರ ಬೆ.ಗಂ.6.45ರ ತನಕ ಚೈತನ್ಯ ಬ್ರಹಕಲಶದ ಅಂಗವಾಗಿ 48 ಗಂಟೆಗಳ ಅಖಂಡ ಭಜನಾ ಸಂಕೀರ್ತನೆ
ಗೌರವಾಧ್ಯಕ್ಷರು/ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಸೇವಾ ಸಮಿತಿ/ಮಹಿಳಾ ಸಮಿತಿ, ಭಜನಾ ಮಂಡಳಿ
ಗೌರವಾಧ್ಯಕ್ಷರು/ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಆಡಳಿತ ಧರ್ಮದರ್ಶಿ ಮಂಡಳಿ
ಗೌರವಾಧ್ಯಕ್ಷರು/ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಬ್ರಹ್ಮಕಲಶೋತ್ಸವ ಸಮಿತಿ
ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಕ್ಷೇತ್ರ ಅಂಜನಾದ್ರಿ ಅಡ್ಕಾರು


ನಾಗೇಶ್ ಅಡ್ಕಾರ್ ಮತ್ತು ಮನೆಯವರು
ಉಪಾಧ್ಯಕ್ಷರು, ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಸೇವಾ ಟ್ರಸ್ಟ್ ಅಂಜನಾದ್ರಿ


ಡಾ.ಆರ್.ಕೆ.ನಾಯರ್
ಏರ್ಮೆಕಾರು, ಗುಜರಾತ್
ಗೌರವಾಧ್ಯಕ್ಷರು, ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಸೇವಾ ಟ್ರಸ್ಟ್ ಅಂಜನಾದ್ರಿ


ಜಯಂತ್ ಗೌಡ ಅಡ್ಕಾರು
ಕೋಶಾಧಿಕಾರಿ
ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಸೇವಾ ಟ್ರಸ್ಟ್ ಅಂಜನಾದ್ರಿ


ಮೋಹನ್ ನಂಗಾರು
ಗೌರವ ಸಲಹೆಗಾರರು
ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಸೇವಾ ಟ್ರಸ್ಟ್ ಅಂಜನಾದ್ರಿ


ಪುರೋಹಿತ ನಾಗರಾಜ ಭಟ್
ಶ್ರೀ ಕೇಶವಕೃಪಾ ವೇದಪಾಠ ಶಾಲೆ ವಿದ್ಯಾನಗರ, ಹಳೆಗೇಟು, ಸುಳ್ಯ
ಮೊ: 9448428862

ಶ್ರೀಮತಿ ಮತ್ತು ಶ್ರೀ ವಿ.ಜೆ ರವಿಪ್ರಸಾದ್ ನ್ಯಾಕ್ ಕಜೆಗದ್ದೆ–ಜಾಲ್ಸೂರು

ಸಂಚಾಲಕರು, ಶ್ರೀ ಪ್ರಸನ್ನಾಂಜನೇಯ ಸ್ವಾಮಿ ಹಾಗೂ ಗುಳಿಗರಾಜ ಸೇವಾ ಟ್ರಸ್ಟ್ ಅಂಜನಾದ್ರಿ

## ಮಾವಿನಕಟ್ಟೆ : ಒತ್ತೆಕೋಲ ಮಹೋತ್ಸವದ ಆಮಂತ್ರಣ ಬಿಡುಗಡೆ



ಮಾವಿನಕಟ್ಟೆ ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನದಲ್ಲಿ ಮಾ.18 ಮತ್ತು 19 ರಂದು ನಡೆಯಲಿರುವ ಶ್ರೀ ದೈವದ ಒತ್ತೆಕೋಲ ಮಹೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ನಡೆಯಿತು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ಶ್ರೀ ಕಟೀಲ್ ಮಾವಿನಕಟ್ಟೆ, ಚಂದ್ರಶೇಖರ ಭಟ್ ತಳೂರು, ಕೃಷ್ಣಯ್ಯ ಮೂಲೆತೋಟ, ಕೋಶಾಧಿಕಾರಿ ಗೋಪಿನಾಥ್ ಮೆತ್ತಡ್ಕ, ವೆಂಕಟ್ರಮಣ ಮೆದು, ನಿತ್ಯಾನಂದ ಪಾರೆಪ್ಪಾಡಿ, ಲೋಕೇಶ್ ಪೂಜಾರಿ ತಳೂರು – ಕೆಳಪಾರೆ, ಪದ್ಮನಾಭ ಮಂಜೋಳುಕಜೆ, ನರಸಿಂಹ ಗೌಡ ಮೆತ್ತಡ್ಕ,ಬಾಲಕೃಷ್ಣ ಪಟ್ಟೆ ತಳೂರು, ನವೀನ್ ಕುಮಾರ್ ಜಾಕೆ, ಲೋಹಿತ್ ಮಾವಿನಕಟ್ಟೆ, ಜಗತ್ ಪಾರೆಪ್ಪಾಡಿ, ಪ್ರಧಾನ ಪೂಜಾರಿ ದಾಮೋದರ ಮಣಿಯಾಣಿ, ರೋಹಿಣಿ ಮಾವಿನಕಟ್ಟೆ ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು

## ಲೋಕೇಶ್.ಕೆ.ಆರ್ ಅವರಿಗೆ ಜೇಸಿಐ ಪಂಜ ಪಂಚಶ್ರೀ ವತಿಯಿಂದ "ಸೆಲ್ಯೂಟ್‌ದ ಸೈಲೆಂಟ್ ಸ್ಟಾರ್" ಪ್ರಶಸ್ತಿ



ಜೆ.ಸಿ.ಐ ಪಂಜ ಪಂಚಶ್ರೀ ಇದರ ವತಿಯಿಂದ ಕೊಡಮಾಡುವ "ಸೆಲ್ಯೂಟ್ ದಿ ಸೈಲೆಂಟ್ ಸ್ಟಾರ್" ಪ್ರಶಸ್ತಿಗೆ ಗುತ್ತಿಗಾರು ಗ್ರಾಮ ಸಹಾಯಕರಾದ ಲೋಕೇಶ್. ಕೆ.ಆರ್ ಅವರು ಭಾಜನರಾಗಿದ್ದಾರೆ.

ಫೆ.27ರಂದು ಪಂಜದ ಶಾರದಾಂಬಾ ಭಜನಾ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೋಕೇಶ್ ರವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಜೆ.ಸಿ.ಐ ಪಂಜ ಪಂಚಶ್ರೀ ಅಧ್ಯಕ್ಷರಾದ ಜೆ.ಎಫ್.ಎಮ್ ದೇವಿಪ್ರಸಾದ್ ಚಿಕ್ಮುಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.


ಮುಖ್ಯ ಅತಿಥಿಗಳಾಗಿ ಜೆ.ಸಿ.ಐ ಭಾರತ ವಲಯ 15ರ ವಲಯ ಉಪಾಧ್ಯಕ್ಷರಾದ ಜೆ.ಸಿ.ಐ ಸೆನ್. ಜಿತೇಶ್ ಪೆರೇರಾ ಹಾಗೂ ಗುತ್ತಿಗಾರು ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಸನತ್ ಮುಳುಗಾಡು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ವಲಯಾಧಿಕಾರಿ ಲೋಕೇಶ್ ಆಕ್ರಿಕಟ್ಟೆ , ನಿಕಟಪೂರ್ವಾಧ್ಯಕ್ಷ ವಾಚಣ್ಣ ಕೆರೆಮೂಲೆ ಕಾರ್ಯದರ್ಶಿ ಪ್ರಕಾಶ್ ಅಳ್ವೆ, ಕಾರ್ಯಕ್ರಮ ನಿರ್ದೇಶಕ ಕಾರ್ತಿಕ್ ಐ.ವಿ. ಉಪಸ್ಥಿತರಿದ್ದರು.

## ವಿನೋಬನಗರ: ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ವಿನೋಬನಗರದ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು. ಸಂಸ್ಥೆಯ ಆರನೇ ತರಗತಿ ವಿದ್ಯಾರ್ಥಿಯಾದ ಆದಿತ್ಯ. ಆರ್ ವಿಜ್ಞಾನ ದಿನದ ಮಹತ್ವ ಮತ್ತು ವಿಶೇಷತೆಯ ಬಗ್ಗೆ ಸ್ಥೂಲವಾಗಿ ವಿವರಿಸಿದರು. ಮತ್ತು ಇದರ ಪ್ರಯುಕ್ತ ವಿದ್ಯಾರ್ಥಿಗಳಿಗೆ ನಡೆದ ಸ್ಪರ್ಧೆ ಬಹುಮಾನವನ್ನು ಸಂಸ್ಥೆಯ ಅಧ್ಯಕ್ಷರಾದ ನ. ಸೀತಾರಾಮರವರು ವಿತರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆ ಮುಖ್ಯೋಪಾಧ್ಯಯರಾದ ಗಿರೀಶ್ ಕುಮಾರ್ ಮತ್ತು ಸಹ ಶಿಕ್ಷಕವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ದರ್ಶನ್ ಡಿ.ಎಸ್. ದೇರುಮಜಲುರಿಗೆ ಏಷಿಯನ್ ಲೆವೆಲ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ



ಮಡಪ್ಪಾಡಿ ಗ್ರಾಮದ ದೇರುಮಜಲು ಶಿವಪ್ರಸಾದ್ ಮತ್ತು ಕುಕ್ಕುಜಡ್ಕದಲ್ಲಿರುವ ನವವೃಕ್ಷ ವಸ್ತ್ರಗಳ ಮಳಿಗೆಯ ಮಾಲಕರಾದ ಜಯಲತಾ ದಂಪತಿಗಳ ಪುತ್ರ ದರ್ಶನ್ ಡಿ.ಎಸ್ ಇವರು ಫೆಬ್ರವರಿ 21 ಮತ್ತು 22ರಂದು ದೆಹಲಿಯಲ್ಲಿ ನಡೆದ ಏಷಿಯನ್ ಲೆವೆಲ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್ 2026ರಲ್ಲಿ 4 ಚಿನ್ನದ ಪಡೆದಿದ್ದಾರೆ. ಇವರು ಎಸ್.ಡಿ.ಎಂ.ಕಾಲೇಜು ಉಜಿರೆಯಲ್ಲಿ ಅಂತಿಮ ವರ್ಷದ ಬಿ.ಬಿ.ಎ. ವ್ಯಾಸಂಗ ಮಾಡುತ್ತಿದ್ದಾರೆ.

## ಸುಬ್ರಹ್ಮಣ್ಯ ಅಗ್ರಹಾರದಲ್ಲಿ ಯೋಗ ಬಂಧುಗಳಿಂದ ಸ್ವಚ್ಛತಾ ಕಾರ್ಯಕ್ರಮ



ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕೇಂದ್ರ ಕಚೇರಿ ತುಮಕೂರು, ನೇತ್ರಾವತಿ ವಲಯ ಮಂಗಳೂರು, ಸುಬ್ರಹ್ಮಣ್ಯ ಶಾಖಾ ವತಿಯಿಂದ ಮಾ.01 ರವಿವಾರ ಸುಬ್ರಹ್ಮಣ್ಯದ ಅಗ್ರಹಾರ ಶ್ರೀ ಸೋಮನಾಥೇಶ್ವರ ದೇವಸ್ಥಾನದ ಮುಂಭಾಗ ಹಾಗೂ ಸ್ನಾನಘಟ್ಟದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಶ್ರೀ ದೇವಳದ ಮುಂಭಾಗದ ಪರಿಸರದಲ್ಲಿ ಎಲ್ಲೆಡೆ ಕಸ ಕಡ್ಡಿ, ಪ್ಲಾಸ್ಟಿಕ್ ಚೀಲ, ಪ್ಲಾಸ್ಟಿಕ್ ಬಾಟಲ್, ಹಾಳೆ ತಟ್ಟೆಗಳು ಇದ್ದುದನ್ನು ತೆರವುಗೊಳಿಸಿ ಪರಿಸರವನ್ನು ಸುಚಿಗೊಳಿಸಲಾಯಿತು. ಸುಬ್ರಹ್ಮಣ್ಯ ಶಾಖೆಯ ಸಂಚಾಲಕ ಪ್ರಭಾಕರ ಹಾಗೂ ಯೋಗ ಬಂಧುಗಳಾದ ವಿಶ್ವನಾಥ ನಡುತೋಟ, ಬಸವರಾಜ ಟೋಂಬೆ, ಜಯಶ್ರೀ, ಗಣೇಶ ಹಾಗೂ ಕಾರ್ತಿಕ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಡ್ತಲೆ: ಹಾಲು ಸಂಗ್ರಹಣಾ ಕೇಂದ್ರ ತೆರೆಯುವ ಕುರಿತು ಪೂರ್ವಭಾವಿ ಸಭೆ ಹಾಗೂ ಹೈನುಗಾರಿಕೆಯ ಬಗ್ಗೆ ಮಾಹಿತಿ ಕಾರ್ಯಾಗಾರ



ಅರಂತೋಡು ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಕರ್ನಾಟಕ ಹಾಲು ಒಕ್ಕೂಟದ ಸಹಯೋಗದಲ್ಲಿ ಅಡ್ತಲೆಯಲ್ಲಿ ನೂತನ ಹಾಲು ಸಂಗ್ರಹಣಾ ಕೇಂದ್ರ ತೆರೆಯುವ ಕುರಿತು ಪೂರ್ವಭಾವಿ ಸಭೆ ಹಾಗೂ ಹೈನುಗಾರಿಕೆಯ ಕುರಿತು ಮಾಹಿತಿ ಕಾರ್ಯಾಗಾರವು ಸಂಘದ ಅಧ್ಯಕ್ಷರಾದ ಮೋಹನ್ ಅಡ್ತಲೆ ಇವರ ಅಧ್ಯಕ್ಷತೆಯಲ್ಲಿ ಮನಮೋಹನ ಮೇಲಡ್ತಲೆ ಇವರ ಮನೆಯಲ್ಲಿ ನಡೆಯಿತು.

ಅರಂತೋಡು ಹಾಲು ಉತ್ಪಾದಕರ ಸಂಘದ ನೇತೃತ್ವದಲ್ಲಿ ನೂತನ ಹಾಲು ಸಂಗ್ರಹಣಾ ಕೇಂದ್ರವನ್ನು ಅಡ್ತಲೆಯಲ್ಲಿ ಮಾರ್ಚ್ 1 ರಿಂದ ಆರಂಭಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು. ಕರ್ನಾಟಕ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕರಾದ ಡಾ. ಸತೀಶ್ ಇವರು ಹಸುಗಳ ಸಾಕಾಣಿಕೆ ಕುರಿತು ಮಾಹಿತಿ ನೀಡಿದರು. ಒಕ್ಕೂಟದ ವೈದ್ಯರಾದ ಕೇಶವ ಸುಳ್ಳಿ ಇವರು ಕರುಗಳ ಆರೈಕೆಯ ಕುರಿತು ಮಾಹಿತಿ ನೀಡಿದರು. ಒಕ್ಕೂಟದ ವಿಸ್ತರಣಾಧಿಕಾರಿ ಶಿವಕುಮಾರ್ ಹೈನುಗಾರಿಕೆಯಲ್ಲಿರುವ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಅರಂತೋಡು ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷರಾದ ಕೇಶವ ಅಡ್ತಲೆ ಶುಭ ಹಾರೈಸಿದರು.ಸಂಘದ ಅಧ್ಯಕ್ಷರಾದ ಮೋಹನ ಅಡ್ತಲೆ ಸ್ವಾಗತಿಸಿ ಕಾರ್ಯದರ್ಶಿ ಶ್ರೀಮತಿ ವಿಮಲಾ ಸೋಮಶೇಖರ ಪೈಕ ಇವರು ಧನ್ಯವಾದಗೈದರು. ಸುಮಾರು 30ಕ್ಕೂ ಮಿಕ್ಕಿ ರೈತರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## ಯುವಜನ ಸಂಯುಕ್ತ ಮಂಡಳಿ ನೇತೃತ್ವದಲ್ಲಿ ನಡೆದ ರಾಜ್ಯ ಯುವ ಸಂಭ್ರಮದ ಲೆಕ್ಕಪತ್ರ ಮಂಡನೆ



ಸುಳ್ಯದ ಯುವಜನ ಸಂಯುಕ್ತ ಮಂಡಳಿ ನೇತೃತ್ವದಲ್ಲಿ ನಡೆದ ರಾಜ್ಯ ಯುವ ಸಂಭ್ರಮ ಸಮಾರಂಭ ಅದ್ದೂರಿಯಾಗಿ ನಡೆದಿದ್ದು, ಇದರ ಲೆಕ್ಕಪತ್ರ ಮಂಡನೆ ಫೆ.27ರಂದು ನಡೆಯಿತು. ಯುವಜನ ಸಂಯುಕ್ತ ಮಂಡಳಿ ಇದರ ಅಧ್ಯಕ್ಷರಾದ ಪವನ್ ಪಲ್ಲತ್ತಡ್ಕ ಇವರ ಅಧ್ಯಕ್ಷತೆಯಲ್ಲಿ ಪಂಜದ ಲಯನ್ಸ್‌ಕ್ಲಬ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಡಾ. ದೇವಿಪ್ರಸಾದ್ ಕಾನತ್ತೂರ್, ಯುವಜನ ಸಂಯುಕ್ತ ಮಂಡಳಿಯ ಪೂರ್ವಾಧ್ಯಕ್ಷರಾದ ವಿಶ್ವನಾಥ ಜಾಕೆ, ಯುವ ಸಂಭ್ರಮ ಕಾರ್ಯಕ್ರಮ ಸಂಘಟನಾ ಸಮಿತಿಯ ಕಾರ್ಯದರ್ಶಿಯಾದ ವಿಜೇಶ್ ಹಿರಿಯಡ್ಕ, ಯುವಜನ ಸಂಯುಕ್ತ ಮಂಡಳಿಯ ಕಾರ್ಯದರ್ಶಿ ಮುರಳಿ ನಳಿಯಾರು, ಕೋಶಾಧಿಕಾರಿ ಲೋಹಿತ್ ಬಾಳಿಕಳ ಉಪಸ್ಥಿತರಿದ್ದರು.

ಯುವ ಸಂಭ್ರಮದಲ್ಲಿ ರೂ. 16,58,673 ಸಂಗ್ರಹವಾಗಿದ್ದು, ರೂ .13,19,159 ಖರ್ಚಾಗಿದ್ದು, ರೂ. 3,39,514 ಉಳಿಕೆಯಾಗಿದೆ. ಈ ಉಳಿಕೆ ಮೊತ್ತದಲ್ಲಿ ರೂ. 25 ಸಾವಿರವನ್ನು ಪಂಜ ದೇವಸ್ಥಾನಕ್ಕೆ ನೀಡಲಾಗಿದ್ದು, ಮುಂದೆ ಸಂಸ್ಥೆಯ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿದ್ದು, ಉಳಿಕೆ ಹಣ ವಿನಿಯೋಗಿಸಲು ನಿರ್ಧರಿಸಲಾಗಿದೆ ಎಂದು ಯು.ಸಂ.ಮಂಡಳಿ ಅಧ್ಯಕ್ಷ ಪವನ್ ಪಲ್ಲತ್ತಡ್ಕ ತಿಳಿಸಿದ್ದಾರೆ

ಕಾರ್ಯಕ್ರಮದ ವರದಿಯನ್ನು ವಿಜೇಶ್ ಹಿರಿಯಡ್ಕ, ಲೆಕ್ಕಪತ್ರ ಮಂಡನೆಯನ್ನು ಲೋಹಿತ್ ಬಾಳಿಕಲ ನೆರವೇರಿಸಿದರು. ಯುವ ಸಂಭ್ರಮ ಕಾರ್ಯಕ್ರಮದ ಎಲ್ಲಾ ವಿಭಾಗದ ಸಂಚಾಲಕರು ವಿವಿಧ ಯುವಕ ಮಂಡಲಗಳ ಪದಾಧಿಕಾರಿಗಳು,ಪಂಜ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು. ಜನಾರ್ದನ ನಾಗತೀರ್ಥ ಸ್ವಾಗತಿಸಿ, ಮುರಳಿ ನಳಿಯಾರು ವಂದಿಸಿದರು. ಪ್ರವೀಣ್ ಕುಮಾರ್ ಜಯನಗರ ನಿರೂಪಿಸಿದರು.

## ಕೊಲ್ಲಮೊಗ್ರು : ಬಂಗ್ಲೆಗುಡ್ಡೆ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಪ್ರಯೋಗ ಮಾದರಿ ಹಾಗೂ ವಸ್ತು ಪ್ರದರ್ಶನ



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಂಗ್ಲೆಗುಡ್ಡೆ ಕೊಲ್ಲಮೊಗ್ರುವಿನಲ್ಲಿ ಶಾಲೆಯಲ್ಲಿ ಫೆ.28ರಂದು ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಪ್ರಯೋಗ ಮಾದರಿ ಹಾಗೂ ವಸ್ತು ಪ್ರದರ್ಶನವನ್ನು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಹಾಗೂ ಪ್ರತಿಯೊಂದನ್ನು ಪ್ರಶ್ನಿಸಿ ತಾರ್ಕಿಕವಾಗಿ ಚಿಂತನೆ ನಡೆಸುವ ಅಂಗವಾಗಿ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮವನ್ನು ಶಾಲಾ ಹಳೆ ವಿದ್ಯಾರ್ಥಿ ಹಾಗೂ ಕಬಡ್ಡಿ ತಂಡದ ಶಾಲಾ ವಿದ್ಯಾರ್ಥಿಗಳಿಗೆ ಜರ್ಸಿಯನ್ನು ಹಾಗೂ ಕಬಡ್ಡಿ ತರಬೇತಿಯನ್ನು ನೀಡಿ ಸಹಕರಿಸಿದ ಹರ್ಷ ಜಾಲುಮನೆ ವೈಜ್ಞಾನಿಕ ರೀತಿಯಲ್ಲಿ ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ಸಿ.ಆರ್‌ಪಿ ಕುಶಾಲಪ್ಪ ತುಂಬತ್ತಾಜೆ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಚಾಂತಾಳ, ಮುಖ್ಯೋಪಾಧ್ಯಾಯರು ಶ್ರೀಮತಿ ಕಮಲ.ಎ, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಪೋಷಕರು, ಹಳೆ ವಿದ್ಯಾರ್ಥಿಗಳು, ಶಾಲಾ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜೇ.ಸಿ.ಐ ಸುಳ್ಯ ಪಯಸ್ವಿನಿಗೆ ವಲಯ ಉಪಾಧ್ಯಕ್ಷರ ಅಧೀಕೃತ ಭೇಟಿ



ಜೇ.ಸಿ.ಐ ಭಾರತದ ಸಂವಿಧಾನ ಬದಲಾವಣೆಯಂತೆ ವಲಯು ಉಪಾಧ್ಯಕ್ಷರು ನಿಯೋಜಿತ ಘಟಕಕ್ಕೆ ಅಧೀಕೃತ ಭೇಟಿ ನೀಡಿ ಆಡಳಿತ ತರಬೇತಿ ಕಾರ್ಯಗಾರವನ್ನು ನಡೆಸಿಕೊಡಬೇಕಾಗಿರುವುದರಿಂದ, ಜೆಸಿಐ ಸುಳ್ಯ ಪಯಸ್ವಿನಿ ಘಟಕಕ್ಕೆ ವಲಯ ಉಪಾಧ್ಯಕ್ಷ ರಾದ ಜೇ.ಸಿ ಸೆನೆಟರ್ ಜಿತೇಶ್ ಪಿರೇರಾ ತಮ್ಮ ಅಧೀಕೃತ ಭೇಟಿಯನ್ನು ಫೆಬ್ರವರಿ 22ರಂದು ಮಾಡಿದರು. ವಲಯ ಉಪಾಧ್ಯಕ್ಷರ ಅಧೀಕೃತ ಬೇಟಿ ಕಾರ್ಯಕ್ರಮವನ್ನು ಸುಳ್ಯದ ಕಾನತ್ತಿಲ ದೇವಮ್ಮ ಕಾಂಪ್ಲೆಕ್ಸ್ ನಲ್ಲಿ ಆಯೋಜಿಸಿದ್ದು, ಈ ಸಂದರ್ಭದಲ್ಲಿ ಘಟಕದ ಸಾಮಾನ್ಯ ಸಭೆಯನ್ನು ಜೇಸಿ ಲತಾಶ್ರೀ ಸುಪ್ರೀತ್ ಮೊಂಟಡ್ಕ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ವೇದಿಕೆಯಲ್ಲಿ ನಿಕಟಪೂರ್ವಾಧ್ಯಕ್ಷರಾದ ಜೆ.ಎಫ್.ಎಮ್ ಸುರೇಶ್ ಕಾಮತ್, ವಲಯ ಉಪಾಧ್ಯಕ್ಷರಾದ ಜೇ.ಸಿ.ಐ ಸೆನೆಟರ್ ಜಿತೇಶ್ ಪಿರೇರಾ, ಮುಖ್ಯ ಅತಿಥಿಗಳಾಗಿ ಪಯಸ್ವಿನಿ ಸೀನಿಯರ್ ಛೆಂಬರ್ ಇಂಟರ್ ನ್ಯಾಶನಲ್ ಇದರ ಅಧ್ಯಕ್ಷರಾದ ಜೇಸಿ. ಹೆಚ್.ಜಿ.ಎಫ್ ಜಯಪ್ರಕಾಶ್ ಕೆ, ಕಾರ್ಯದರ್ಶಿ ಜೇಸಿ. ತಾರ ಮಾಧವ ಚೂಂತಾರು ಉಪಸ್ಥಿತರಿದ್ದರು. ಸಾಮಾನ್ಯ ಸಭೆಯಲ್ಲಿ ಘಟಕದಲ್ಲಿ ಕೈಗೊಂಡ ನಿರ್ಣಯಗಳು ಹಾಗೂ ಘಟಕದ ಕಾರ್ಯಚಟುವಟಿಕೆಗಳನ್ನು ಕಾರ್ಯದರ್ಶಿಯವರು ಸಭೆಗೆ ಮಂಡಿಸಿದರು. ನಂತರ ಜೇಸಿ ಸೆನೇಟರ್ ಜಿತೇಶ್ ಪಿರೇರಾ ಅವರು ತರಬೇತಿ ಕಾರ್ಯಗಾರವನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಪೂರ್ವ ವಲಯಾಧ್ಯಕ್ಷರಾದ ಪಿ.ಪಿ.ಪಿ ಅಶೋಕ್ ಚೂಂತಾರ್, ಜೆಸಿ ದೇವರಾಜ್ ಕುದ್ಪಾಜೆ, ಜೆ.ಸಿ ಹೆಚ್.ಜಿ.ಎಫ್ ನವೀನ್ ಕುಮಾರ್, ಜೇಸಿ.ರವಿಕುಮಾರ್, ಶಂಕರ್ ಪೆರಾಜೆ, ರಂಜಿತ್ ಪೂಜಾರಿ, ಕೇಶವ, ಮಂಜುನಾಥ್, ಅಶೋಕ್ ಅಡ್ಕಾರ್, ಸುಪ್ರೀತ್ ಮೋಂಟಡ್ಕ ಮೊದಲದವರು ಉಪಸ್ಥಿತರಿದ್ದರು. ಜೇಸಿ ಶೋಭಾ ಅಶೋಕ್ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸಿ, ಜೇಸಿ.ಸುನಿತಾ ರವಿಕುಮಾರ್ ಜೇಸಿವಾಣಿ ವಾಚಿಸಿದರು. ಜೇಸಿ. ವಿನೋದ್ ಮೂಡಗದ್ದೆ ವಲಯ ಉಪಾಧ್ಯಕ್ಷನ್ನು ಸಭೆಗೆ ಪರಿಚಯಿಸಿದರು.

## ವೃತ್ತಿ ಬದುಕಿನ ಯಶಸ್ಸಿಗೆ ಸಂದರ್ಶನ ಕೌಶಲ್ಯ ಅಗತ್ಯ: ಸೀತಾರಾಮ ಕೇವಳ ಬೆಳ್ಳಾರೆ ಜ್ಞಾನದೀಪದಲ್ಲಿ ಸಂದರ್ಶನ ಕೌಶಲ್ಯ ಕಾರ್ಯಾಗಾರ




ಭವಿಷ್ಯ ನಿರ್ಮಾಣಕ್ಕೆ ಸಂದರ್ಶನ ಕೌಶಲ್ಯ ತರಬೇತಿ ಸಹಕಾರಿಯಾಗಿದ್ದು, ಸಂದರ್ಶನ ಎದುರಿಸುವ ಗುಟ್ಟು ತಿಳಿದಾಗ ಮಾತ್ರ ಉತ್ತಮ ಉದ್ಯೋಗದ ಕನಸು ನನಸಾಗಿಸಿಕೊಳ್ಳಲು ಸಾಧ್ಯ ಎಂದು ಜೇಸಿಐ ರಾಷ್ಟ್ರೀಯ ತರಬೇತುದಾರ ಸೀತಾರಾಮ ಕೇವಳ ಹೇಳಿದರು. ಅವರು ಬೆಳ್ಳಾರೆ ಜ್ಞಾನದೀಪ ಮೊಂಟೆಸ್ಸರಿ ಶಿಕ್ಷಕಿಯರ ತರಬೇತಿ ಸಂಸ್ಥೆಯ ವತಿಯಿಂದ ಜ್ಞಾನದೀಪ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಒಂದು ದಿನದ ಸಂದರ್ಶನ ಕೌಶಲ್ಯ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತರಬೇತಿ ನೀಡಿದರು.

ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ದ. ಕ ಜಿಲ್ಲಾಧ್ಯಕ್ಷ ಈಶ್ವರ ವಾರಣಾಶಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಸಂದರ್ಶನ ಭಯ ನಿವಾರಣೆಗೆ ಇಂತಹ ಮಾರ್ಗದರ್ಶನ ಕಾರ್ಯಾಗಾರಗಳು ಅವಶ್ಯ ಎಂದರು.

ಸಂಸ್ಥೆಯ ನಿರ್ದೇಶಕ ಉಮೇಶ್ ಮಣಿಕ್ಕಾರ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕಿ ರಶ್ಮಿ ಶೆಣಿ ಸ್ವಾಗತಿಸಿದರು. ಶಿಕ್ಷಕಿ ಸಿಂಚನಾ ಕೆ ಪಿ ವಂದಿಸಿದರು. ಉಪನ್ಯಾಸಕ ಯೋಗೀಶ್ ತಳೂರು ಕಾರ್ಯಕ್ರಮ ನಿರ್ವಹಿಸಿದರು.

## ಸುಬ್ರಹ್ಮಣ್ಯ : ಕುಕ್ಕೆಶ್ರೀ ಆಟೋ ಚಾಲಕ–ಮ್ಹಾಲಕರ ಸಂಘದ ವತಿಯಿಂದ 15ನೇ ವರ್ಷದ ವಾರ್ಷಿಕೋತ್ಸವ



ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕುಕ್ಕೆಶ್ರೀ ಅಟೋ ಚಾಲಕ ಮ್ಹಾಲಕರ ಸಂಘದ ವತಿಯಿಂದ 15ನೇ ವರ್ಷದ ವಾರ್ಷಿಕೋತ್ಸವವನ್ನು ಫೆ.26 ರಂದು ಸಂಜೆ ಸವಾರಿ ಮಂಟಪದ ಬಳಿ ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮವನ್ನು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಹರೀಶ್ ಇಂಜಾಡಿ ಅವರು ದೀಪಬೆಳಗಿಸಿ ಉದ್ಘಾಟಿಸಿದರು. ಸಂಘದ ಗೌರವಾಧ್ಯಕ್ಷರಾದ ಉಮೇಶ್ ಕೆ.ಎನ್ ಸಭಾಧ್ಯಕ್ಷತೆ ವಹಿಸಿ ಸಂಘದ 15 ವರ್ಷದ ಸೇವಾ ಪಯಣವನ್ನು ಸ್ಮರಿಸಿದರು.

ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಸುಜಾತಾ ಕಲ್ಲಾಜೆ, ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ, ನ್ಯಾಯವಾದಿ ಎಂ.ವೆಂಕಪ್ಪ ಗೌಡ ಹಾಗೂ ಗೌರವ ಸದಸ್ಯ ಅಶೋಕ್ ನೆಕ್ರಾಜೆ ಭಾಗವಹಿಸಿ ಸಂಘದ ಸಮಾಜಮುಖಿ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಸೈನಿಕ ಶ್ರೀ ನವೀನ್ ಕುಮಾರ್ ಕೆ, ರಾಷ್ಟ್ರಮಟ್ಟದ ನೆಟ್‌ಬಾಲ್‌ನಲ್ಲಿ ಚಿನ್ನದ ಪದಕ ವಿಜೇತೆ ಕು.ತಪಸ್ಯ.ಎಸ್ ನಾಯಕ್, ರಾಷ್ಟ್ರಮಟ್ಟದ ವೈಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರತಿಭೆ ಗಣೇಶ್ ಕಕ್ಕೆಪದವು ಅವರನ್ನು ಸನ್ಮಾನಿಸಲಾಯಿತು.

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಕು.ಅಕ್ಷರಿ ಆರ್.ಎಸ್, ಮಾ.ಭವಿಷ್ ಕುಮಾರ್.ಎಸ್ ಹಾಗೂ ರಿಕ್ಷಾ ಚಾಲಕರ ಪುತ್ರ ಮಾ. ಆತ್ಮಿಕ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ "ಅಕ್ಷರ ನಿಧಿ" ಯೋಜನೆಯಡಿ ಸದಸ್ಯರಿಗೆ ಸಹಾಯಧನ ವಿತರಣೆ ಮಾಡಲಾಯಿತು. ಜೊತೆಗೆ ಸಂಘದ ವಾರ್ಷಿಕ ಕ್ರೀಡಾಕೂಟದ ಬಹುಮಾನಗಳನ್ನು ಶ್ರೀಮತಿ ಮಂಗಳ ಕಿಣಿ ವಿತರಿಸಿದರು.

ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಂಘದ ಸದಸ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

## ಅಮುಕ್ತದ ಅಧ್ಯಕ್ಷರಾಗಿ ಡಾ. ಪುರುಷೋತ್ತಮ.ಕೆ.ವಿ ಕರಂಗಲ್ಲು



ಮಂಗಳೂರು ವಿಶ್ವವಿದ್ಯಾಲಯ ಕಾಲೇಜು ಅಧ್ಯಾಪಕರ ಸಂಘ(ಅಮುಕ್ತ)ದ ಅಧ್ಯಕ್ಷರಾಗಿ ಸುಳ್ಯ ತಾಲೂಕು ದೇವಚಳ್ಳ ಗ್ರಾಮದ ಡಾ. ಪುರುಷೋತ್ತಮ.ಕೆ.ವಿ ಕರಂಗಲ್ಲು ರವರು ಆಯ್ಕೆಯಾಗಿದ್ದಾರೆ.

ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಡಾ. ಎಸ್.ಎ ಮಂಜುನಾಥ್ ರವರ ಅಧ್ಯಕ್ಷತೆಯಲ್ಲಿ ನಡೆದ 39ನೇ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು.

ಮಂಗಳೂರಿನ ಪೊಂಪೈ ಕಾಲೇಜಿನ ಪ್ರಾಂಶುಪಾಲರಾದ ಡಾ. ಪುರುಷೋತ್ತಮ. ಕೆ.ವಿ ರವರು ಈ ಹಿಂದೆ ಎರಡು ಅವಧಿಗೆ ಅಮುಕ್ತದ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದರು.

ದೇವಚಳ್ಳ ಗ್ರಾಮದ ಕರಂಗಲ್ಲು ದಿ। ವೆಂಕಪ್ಪ ಮತ್ತು ದಿ। ದುಗ್ಗಮ್ಮ ದಂಪತಿಗಳ ಪುತ್ರರಾಗಿರುವ ಡಾ. ಪುರುಷೋತ್ತಮ. ಕೆ.ವಿ ರವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ರವರು ನಂತೂರು ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಮಕ್ಕಳು ತ್ರಿಶೂಲ್ ಹಾಗೂ ತೇಜಸ್ವಿ. **(ವರದಿ : ಉಲ್ಲಾಸ್ ಕಜ್ಜೋಡಿ)**

## ಸುಬ್ರಹ್ಮಣ್ಯ : ಕೆ.ಎಸ್.ಎಸ್ ಕಾಲೇಜಿನ ಎನ್.ಎಸ್.ಎಸ್ ಘಟಕದ ವತಿಯಿಂದ ಸ್ವಚ್ಛತಾ ಕಾರ್ಯಕ್ರಮ




ಸುಬ್ರಹ್ಮಣ್ಯದ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಮಾ.1ರಂದು ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಮಾರ್ಗದರ್ಶನದಲ್ಲಿ ಎನ್.ಎಸ್.ಎಸ್ ಸ್ವಯಂಸೇವಕರು ಕುಮಾರಧಾರ ಸ್ನಾನಘಟ್ಟದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಮಾಡಿದರು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಬರುವ ಸಹಸ್ರಾರು ಭಕ್ತಾದಿಗಳು ಕುಮಾರಧಾರ ಸ್ನಾನಘಟ್ಟದ ಬಳಿ ತೀರ್ಥ ಸ್ನಾನವನ್ನು ಮಾಡುತ್ತಿದ್ದು, ಅದರಲ್ಲಿ ಹಲವು ಮಂದಿ ತಮ್ಮ ಬಟ್ಟೆ ಬರೆ,ಸೋಪು, ಶ್ಯಾಂಪು, ಪೇಸ್ಟ್, ಬ್ರಷ್, ಪ್ಲಾಸ್ಟಿಕ್ ಚೀಲ ಇತ್ಯಾದಿಗಳನ್ನು ಸ್ನಾನಘಟ್ಟದ ಮೆಟ್ಟಿಲುಗಳಲ್ಲಿ ಹಾಗೂ ಹಳೆ ಬಟ್ಟೆಗಳನ್ನು ನೀರಿನಲ್ಲಿ ಬಿಟ್ಟು ಹೋಗಿರುವುದು ಇಡೀ ಪರಿಸರವನ್ನು ಹಾಳುಗೆಡವಿತ್ತು. ಇದನ್ನು ಮನಗಂಡ ಕೆ.ಎಸ್.ಎಸ್ ಕಾಲೇಜಿನ ಎನ್.ಎಸ್.ಎಸ್ ಘಟಕದ ಸುಮಾರು 50–60 ಸ್ವಯಂಸೇವಕರು ನೀರಿನಿಂದ ಬಟ್ಟೆ ಬರೆಗಳನ್ನು ಮೇಲೆತ್ತಿ ಹಾಕಿ ಹಾಗೂ ದಡದಲ್ಲಿದ್ದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಅಕ್ಕಪಕ್ಕದಲ್ಲಿದ್ದ ಕಸ ಕಡ್ಡಿಗಳು ಹಾಗೂ ಪ್ಲಾಸ್ಟಿಕ್ ಚೀಲಗಳು ಇತ್ಯಾದಿಗಳನ್ನು ತೆರವುಗೊಳಿಸಿ, ಇಡೀ ಪರಿಸರವನ್ನು ಸುಚಿಗೊಳಿಸಿದರು. ಕೆ.ಎಸ್.ಎಸ್ ಕಾಲೇಜಿನ ಪ್ರಾಂಶುಪಾಲರಾದ ಡಾಟ ದಿನೇಶ್ ಪಿ.ಟಿ, ಸುಬ್ರಹ್ಮಣ್ಯ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮೋನಪ್ಪ.ಡಿ, ಎನ್.ಎಸ್.ಎಸ್ ಸಂಯೋಜನಾಧಿಕಾರಿಗಳಾದ ಆರತಿ ಹಾಗೂ ಸುಮಿತ್ರ ಮಾರ್ಗದರ್ಶನ ನೀಡಿದರು.

## ಕೆ.ಆರ್.ಎಸ್. ಪಕ್ಷದ ವತಿಯಿಂದ ಸುಳ್ಯದಲ್ಲಿ ಲಂಚಮುಕ್ತ ಅಭಿಯಾನಕ್ಕೆ ಮನವಿ



ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಲಂಚಮುಕ್ತ ಅಭಿಯಾನದ ಅಂಗವಾಗಿ ಸುಳ್ಯ ತಾಲೂಕು ಕಛೇರಿಯಲ್ಲಿ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ದ.ಕ. ಜಿಲ್ಲಾಧ್ಯಕ್ಷ ವೇಣುಗೋಪಾಲ ಅವರು ತಾಲೂಕು ಉಪ ತಹಶಿಲ್ದಾರ್ ಅವರಿಗೆ ಲಂಚಮುಕ್ತ ಅಭಿಯಾನದ ಮನವಿ ಪತ್ರ ಸಲ್ಲಿಸಿದರು.

ತಾಲೂಕು ಕಛೇರಿಯಲ್ಲಿ ಜನಸಾಮಾನ್ಯರಿಗೆ ಎಲ್ಲಾ ಕೆಲಸ ಕಾರ್ಯಗಳನ್ನು ಯಾವುದೇ ಲಂಚ ತೆಗೆಯದೇ, ಶೀಘ್ರವಾಗಿ ಕೆಲಸ ಮಾಡಿಕೊಡುವಂತೆ ಮಾಡಬೇಕು ಎಂಬುದಾಗಿ ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ದ.ಕ. ಜಿಲ್ಲಾ ಉಪಾಧ್ಯಕ್ಷ ವಿನ್ನಿ ಪಿಂಟೋ, ಜಿಲ್ಲಾ ಕಾರ್ಯದರ್ಶಿ ಸಿಜು , ರೋಷನ್ ಲೋಬೋ, ಡಿ.ಎಂ. ಶಾರಿಖ್ ಸುಳ್ಯ, ನಾಗರಾಜ್ , ದಿನೇಶ್ ಎಂ.ಆರ್. ಉಪಸ್ಥಿತರಿದ್ದರು.

## ಸುಳ್ಯ ತಾ. ಕಛೇರಿಯಲ್ಲಿ ಕೆ.ಆರ್.ಎಸ್. ಪಕ್ಷದ ಕಾರ್ಯಕರ್ತರಿಂದ ಕಾರ್ಯಾಚರಣೆ

### ಗ್ರಾಮ ನಕ್ಷೆ ತಯಾರಿಕೆಗೆ ಲಂಚ–ನಕ್ಷೆಯೊಂದಿಗೆ ಲಂಚದ ಹಣ ವಾಪಾಸ್

ಗ್ರಾಮನಕ್ಷೆಗಾಗಿ ಲಂಚ ಪಡೆದಿದ್ದಾರೆ ಎಂಬ ಮಾಹಿತಿ ಪಡೆದ ಕೆ.ಆರ್.ಎಸ್. ಪಕ್ಷದ ಕಾರ್ಯಕರ್ತರು ಸುಳ್ಯದ ತಾಲೂಕು ಕಛೇರಿಯಲ್ಲಿ ಕಾರ್ಯಾಚರಣೆ ನಡೆಸಿದ ಫಲವಾಗಿ ಗ್ರಾಮನಕ್ಷೆಯೊಂದಿಗೆ ಲಂಚವಾಗಿ ನೀಡಿದ ಹಣವು ವಾರಿಸುದಾರರಿಗೆ ಮರಳಿ ದೊರೆತ ಘಟನೆ ವರದಿಯಾಗಿದೆ.

ಬೊಳುಬೈಲು ನಿವಾಸಿಯಾದ ದಿನೇಶ್ ಎಂ.ಆರ್. ಅವರು ಸುಳ್ಯದ ಗ್ರಾಮ ನಕ್ಷೆಗಾಗಿ ಐದು ತಿಂಗಳ ಹಿಂದೆ ಅರ್ಜಿ ಕೊಟ್ಟಿದ್ದರು ಆದರೆ ಅವರಿಗೆ ಗ್ರಾಮನಕ್ಷೆ ದೊರೆತಿರಲಿಲ್ಲ.ಬಂದು ಕೇಳಿದರೂ ನಾಳೆ ಕೊಡುತ್ತೇವೆ. ನಾಡದು ಕೊಡುತ್ತೇವೆ ಎಂದು ಹೇಳುತ್ತಿದ್ದರೆನ್ನಲಾಗಿದೆ. ಗ್ರಾಮನಕ್ಷೆಗಾಗಿ ತಾಲೂಕು ಕಛೇರಿಗೆ ಅಗಾಗ ಅಲೆದಾಟ ನಡೆಸಿ ಬೇಸರಗೊಂಡ ದಿನೇಶ್ ಅವರು ಕೆ.ಆರ್.ಎಸ್. ಪಕ್ಷದ ಕಾರ್ಯಕರ್ತರನ್ನು ಸಂಪರ್ಕಿಸಿ, ಅವರಲ್ಲಿ ವಿಷಯ ತಿಳಿಸಿದ್ದರು. ಅದರಂತೆ ಕಳೆದ ವಾರ ತಾಲೂಕು ಕಛೇರಿಗೆ ದಿನೇಶ್ ಎಂ.ಆರ್. ಅವರ ಜೊತೆ ಬಂದ ಕೆ.ಆರ್.ಎಸ್. ಪಕ್ಷದ ಕಾರ್ಯಕರ್ತರು ಸರ್ವೆಯರ್ ಅವರಲ್ಲಿ ವಿಚಾರಣೆ ನಡೆಸಿದಾಗ ಗ್ರಾಮನಕ್ಷೆಯ ಜೆರಾಕ್ಸ್ ಪ್ರತಿಯನ್ನು ಸೀಲ್ ಮತ್ತು ಸಹಿ ಹಾಕಿ ದಿನೇಶ್ ಅವರಿಗೆ ನೀಡಿದರೆನ್ನಲಾಗಿದೆ.

ಅಲ್ಲದೇ, ಗ್ರಾಮನಕ್ಷೆಗಾಗಿ ಐದು ತಿಂಗಳ ಹಿಂದೆ ಸರ್ವೆಯರ್ ಸಹಾಯಕ ಸಿಬ್ಬಂದಿಗೆ ದಿನೇಶರು ನೀಡಿದ್ದ ರೂ.500 ಲಂಚದ ಹಣವನ್ನು ಅವರಿಗೆ ಹಿಂತುರುಗಿಸಿದರೆಂದು ತಿಳಿದುಬಂದಿದೆ.

ಈ ಸಂದರ್ಭದಲ್ಲಿ ಕೆ.ಆರ್.ಎಸ್. ಪಕ್ಷದ ದ.ಕ. ಜಿಲ್ಲಾಧ್ಯಕ್ಷ ವೇಣುಗೋಪಾಲ, ಜಿಲ್ಲಾ ಉಪಾಧ್ಯಕ್ಷ ವಿಜಯ ಪಿಂಟೋ, ಕಾರ್ಯದರ್ಶಿ ಸಿಜು ರೋಷನ್, ಲೋಬೋ, ನಾಗರಾಜ್, ಶಾರಿಖ್ ಡಿ.ಎಂ., ನವೀನ್ ಸೇರಿದಂತೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

## ಅರಂತೋಡು ನುಸ್ರತುಲ್ ಇಸ್ಲಾಂ ಮದ್ರಸಕ್ಕೆ ಶೇ.100 ಫಲಿತಾಂಶ

ಸಮಸ್ತ ಮತ ವಿದ್ಯಾಭ್ಯಾಸ ಸಂಸ್ಥೆ ನಡೆಸಿದ 2025 –26ನೇ ಸಾಲಿನ ಪಬ್ಲಿಕ್ ಪರೀಕ್ಷೆಯಲ್ಲಿ ಅರಂತೋಡಿನ ನುಸ್ರತುಲ್ ಇಸ್ಲಾಂ ಮದ್ರಸವು ಶೇ.100 ಫಲಿತಾಂಶ ದಾಖಲಿಸಿದೆ.

ಹತ್ತನೇ ತರಗತಿ ವಿದ್ಯಾರ್ಥಿಗಳಾದ ಫಾತಿಮತ್ ರಿಯಾನ, ತಿಶ ಖದೀಜ, ಅನ ಫಾತಿಮ, 7ನೇ ತರಗತಿಯ ಶಾಕಿರ್, ಫಾತಿಮತ್ ಲುಬಾಬ, ಫಾತಿಮತ್ ಝೂಹಿರಾ, ಆಯಿಷಾ, ನಿಮ್ರಾ, ಐದನೇ ತರಗತಿಯ ಎಸ್.ಎಂ.ರಿಫಾ, ಸದಾ ಫಾತಿಮಾ ಡಿಸ್ಟಿಂಕ್ಷನ್ ಅಂಕಗಳೊಂದಿಗೆ ತೇರ್ಗಡೆ ಹೊಂದಿದ್ದಾರೆ. ಅರಂತೋಡು ನುಸ್ರತುಲ್ ಇಸ್ಲಂ ಮದ್ರಸವು ಕಳೆದ ಹಲವಾರು ವರ್ಷಗಳಿಂದ ಶೇ.100 ಫಲಿತಾಂಶವನ್ನು ದಾಖಲಿಸುತ್ತಾ ಬಂದಿವೆ.

# ಸುಳ್ಯದ ರೊಮ್ಯಾಂಟಿಕ್ ವಸ್ತ್ರಮಳಿಗೆಯಲ್ಲಿ ಉಚಿತ ಬಟ್ಟೆಗಳ ಕೊಡುಗೆ

## ಬಟ್ಟೆ ಖರೀದಿಗೆ ಸರತಿ ಸಾಲಿನಲ್ಲಿ ಬಂದ ಗ್ರಾಹಕರು




ಸುಳ್ಯದ ರಥಬೀದಿಯಲ್ಲಿರುವ ರೊಮ್ಯಾಂಟಿಕ್ ವಸ್ತ್ರ ಮಳಿಗೆಯ ವತಿಯಿಂದ ಸಂಸ್ಥೆಯ ಮೊದಲ ವರ್ಷಾಚರಣೆಯ ಪ್ರಯುಕ್ತ ಸಂಸ್ಥೆಯ ಮಾಲಕರು 300 ಜನರಿಗೆ ವಸ್ತ್ರಗಳನ್ನು ಕೊಡುಗೆಯಾಗಿ ಮಾ.1ರಂದು ನೀಡಿದ್ದು, ಇದರ ಖರೀದಿಗಾಗಿ ಗ್ರಾಹಕರು ಸರತಿ ಸಾಲಿನಲ್ಲಿ ಬಂದು ಖರೀದಿಸಿದರು. ಪ್ರಥಮ ವರ್ಷಾಚರಣೆ ಪ್ರಯುಕ್ತ 100 ಜನರಿಗೆ ಸಾರಿ, 100 ಜನರಿಗೆ ಶರ್ಟ್ ಹಾಗೂ 100 ಜನರಿಗೆ ಟಾಪ್ ನೀಡುವುದೆಂದು ಮಾಲಕರು ಪ್ರಕಟಣೆ ಹೊರಡಿಸಿದ್ದರು.

ಮಾ.1ರಂದು ಬೆಳಿಗ್ಗೆ ರೊಮ್ಯಾಂಟಿಕ್ ವಸ್ತ್ರ ಮಳಿಗೆಯ ಎರಡೂ ಬದಿಯಲ್ಲಿ ಮಹಿಳೆಯರು ಹಾಗೂ ಪುರುಷರ ಪ್ರತ್ಯೇಕವಾಗಿ ಸರತಿ ಸಾಲಿನಲ್ಲಿ ಬಂದಾಗ ಮಳಿಗೆಯವರು ಟೋಕನ್‌ನ್ನು ಗ್ರಾಹಕರಿಗೆ ನೀಡಿದರು. ಒಟ್ಟಿನಲ್ಲಿ ಉಚಿತ ವಸ್ತ್ರ ಘೋಷಣೆಗೆ ಗ್ರಾಹಕರಿಂದ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದಾಗಿ ಸಂಸ್ಥೆಯ ಮಾಲಕರು ತಿಳಿಸಿದ್ದಾರೆ.

# ಮಡಪ್ಪಾಡಿ: ಈಡೇರದ ಬೇಡಿಕೆ–ಮತದಾನ ಬಹಿಷ್ಕಾರಕ್ಕೆ ನಿರ್ಧರಿಸಿದ ಗ್ರಾಮಸ್ಥರು




ಮಡಪ್ಪಾಡಿ ಗ್ರಾಮದ ಹಾಡಿಕಲ್ಲು ನಿವಾಸಿಗಳು ಸುಮಾರು 20 ವರ್ಷಗಳಿಂದ ಸೇತುವೆ ನಿರ್ಮಾಣಕ್ಕಾಗಿ ಶಾಸಕರಿಗೆ ಹಾಗೂ ಸಚಿವರುಗಳಿಗೆ ಮನವಿ ಮಾಡಿಕೊಂಡರೂ ಯಾವುದೇ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ಹಾಗೂ ಸೇತುವೆ ಮಾಡಿಸುವುದೆಂದು ಗುದ್ದಲಿಪೂಜೆ ನಡೆಸಲಾಗಿದ್ದು ಸೇತುವೆ ಆಗುವವರೆಗೆ ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಮತದಾನ ಬಹಿಷ್ಕರಿಸುತ್ತಿದ್ದೇವೆ ಎಂದು ಬ್ಯಾನರ್ ಅಳವಡಿಸಿ ಜನಪ್ರತಿನಿಧಿಗಳನ್ನು ಎಚ್ಚರಿಸಿದ್ದಾರೆ.

# ಅಜ್ಜಾವರ: ಶಿರಾಜೆಯಲ್ಲಿ ಚುನಾವಣೆ ಬಹಿಷ್ಕಾರ' ಬ್ಯಾನರ್ ಅಳವಡಿಕೆ



ಅಜ್ಜಾವರ ಗ್ರಾಮದ ಶಿರಾಜೆಯಿಂದ ಬೇಲ್ಯದ ಬೀನಡ್ಕದವರೆಗೆ ಸುಮಾರು 3.ಕಿ.ಮೀ ರಸ್ತೆಯನ್ನು ಡಾಮರೀಕರಣಗೊಳಿಸಲು ವಿಳಂಬ ಧೋರಣೆಯಿಂದ ನೊಂದಿರುವ ಶಿರಾಜೆ ಭಾಗದ ನಾಗರಿಕರು ಚುನಾವಣೆ ಬಹಿಷ್ಕಾರದ ಬ್ಯಾನರ್ ಅಳವಡಿಸಿದ್ದಾರೆ.


ಸುಮಾರು ನಲವತ್ತು ವರ್ಷಗಳಿಂದ ಅನೇಕ ಬಾರಿ ರಸ್ತೆ ಡಾಮರೀಕರಣಕ್ಕೆ ಈ ಭಾಗದ ನಾಗರಿಕರು ಬೇಡಿಕೆ ಇಟ್ಟಿದ್ದು ಹಾಗೂ ಸಮರ್ಪಕ ಕುಡಿಯುವ ನೀರಿನ ಸೌಲಭ್ಯ ದೊರಕದೇ ಇದ್ದು, ಯಾವುದೇ ಮನವಿಗೆ ಸ್ಪಂದಿಸದೆ ಸುಳ್ಳು ಆಶ್ವಾಸನೆಯನ್ನು ನೀಡುತ್ತಾ ಬಂದಿರುವ ರಾಜಕಾರಣಿಗಳಿಗೆ ಧಿಕ್ಕಾರ. ಇದೇ ರೀತಿ ನಮ್ಮನ್ನು ಕಡೆಗಣಿಸಿದ್ದೇ ಆದಲ್ಲಿ ಮುಂದಿನ ಚುನಾವಣೆಯನ್ನು ಬಹಿಷ್ಕರಿಸುತ್ತೇವೆ. ಎಂದು "ಸೌಲಭ್ಯ ವಂಚಿತ ಶಿರಾಜೆ, ಬೇಲ್ಯ ಬೀನಡ್ಕ ನಾಗರೀಕರು" ಎಂಬ ಬ್ಯಾನರ್ ಹಾಕಿದ್ದಾರೆ.

# ಬೆಳ್ಳಾರೆ ಹಿದಾಯತುಲ್ ಇಸ್ಲಾಂ ಮದ್ರಸಕ್ಕೆ ಶೇ. 100 ಫಲಿತಾಂಶ

ಸಮಸ್ತ ವಿದ್ಯಾಥಭ್ಯಾಸ ಮಂಡಳಿ ವತಿಯಿಂದ ನಡೆದ 2025–26 ನೇ ಸಾಲಿನ ಪಬ್ಲಿಕ್ ಪರೀಕ್ಷೆಯಲ್ಲಿ ಬೆಳ್ಳಾರೆ ಝುಕರಿಯಾ ಜುಮಾ ಮಸೀದಿ ಅಧೀನದಲ್ಲಿರುವ ಹಿದಾಯತುಲ್ ಇಸ್ಲಾಂ ಹೈಯರ್ ಸೆಕೆಂಡರಿ ಮದ್ರಸ ಶೇಕಡಾ 100 ಫಲಿತಾಂಶ ಗಳಿಸಿದೆ.

5,7,10,+2 ತರಗತಿಗಳಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ 1 ಟಾಪ್ ಪ್ಲಸ್, 10 ಡಿಸ್ಟಿಂಕ್ಷನ್, 24 ಪ್ರಥಮ ಶ್ರೇಣಿ, 15 ದ್ವಿತೀಯ ಹಾಗೂ 10 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

# ಬೆಳ್ಳಾರೆಯ ಪಳ್ಳಿಮಜಲು ಮದರಸಕ್ಕೆ ಶೇ.100 ಫಲಿತಾಂಶ


ಮುಹಮ್ಮದ್ ಶಮ್ಮಾಸ್ ಎಸ್.ಬಿ


ಮುಹಮ್ಮದ್ ಜಝೀಲ್


ಫಹೀಮ್ ಅಹಮದ್


ತನ್ವೀರ್

ಸಮಸ್ತ ಕೇರಳ ಸುನ್ನೀ ವಿದ್ಯಾಭ್ಯಾಸ ಬೋರ್ಡ್ ನಡೆಸಿದ 2025–26ನೇ ಸಾಲಿನ ಪಬ್ಲಿಕ್ ಪರೀಕ್ಷೆಯಲ್ಲಿ ಬೆಳ್ಳಾರೆ ಗ್ರಾಮದ ಪಳ್ಳಿಮಜಲು ಸಿರಾಜುಲ್ ಹುದಾ ಸೆಕೆಂಡರಿ ಮದರಸಕ್ಕೆ ಶೇ 100 ಫಲಿತಾಂಶ ಬಂದಿದೆ. ಈ ಮದರಸದ ಪ್ಲಸ್‌ಟು ವಿಭಾಗದ ಫಾತಿಮತ್ ಶಮ್ನ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದು, ದ್ವಿತೀಯ ಸ್ಥಾನವನ್ನು ಆಯಿಶತ್ ರಾಶಿದ ಪಡೆದುಕೊಂಡಿದ್ದಾರೆ.ಸಾಜಿದಾ ಡಿಸ್ಟಿಂಕ್ಷನೊಂದಿಗೆ ತೇರ್ಗಡೆಗೊಂಡಿದ್ದಾರೆ. 5ನೇ ತರಗತಿಯ ಪಹೀಮ್ ಅಹಮದ್ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದು, 5ನೇ ತರಗತಿಯ ತನ್ವೀರ್ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. 7ನೇ ತರಗತಿಯ ಮುಹಮ್ಮದ್ ಶಮ್ಮಾಸ್ ಎಸ್.ಬಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದು,ದ್ವಿತೀಯ ಸ್ಥಾನವನ್ನು ಮುಹಮ್ಮದ್ ಜಝೀಲ್ ಪಡೆದುಕೊಂಡಿದ್ದಾರೆ.

# ರಾಷ್ಟ್ರಮಟ್ಟದ ವಾಲಿಬಾಲ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ರಾಜ್ಯ ತಂಡಕ್ಕೆ ಸುಳ್ಯದ ವಿಪುಲ್ ರೈ ಆಯ್ಕೆ



ಈಶಾನ್ಯ ರಾಜ್ಯವಾದ ಒಡಿಸ್ಸಾ ದಲ್ಲಿ ಮಾ.26 ರಂದು ನಡೆಯಲಿರುವ ರಾಷ್ಟ್ರಮಟ್ಟದ ವಾಲಿಬಾಲ್ ಚಾಂಪಿಯನ್ ಶಿಪಿಗೆ ಕರ್ನಾಟಕ ರಾಜ್ಯ ತಂಡಕ್ಕೆ ಸುಳ್ಯದ ವಿಪುಲ್ ರೈ ಬೂಡು ಆಯ್ಕೆಯಾಗಿದ್ದಾರೆ. ರಾಷ್ಟ್ರೀಯ ವಾಲಿಬಾಲ್ ಆಟಗಾರರಾದ ಗಣೇಶ್ ರೈ ಮುಂಡಾಸು ಮತ್ತು ಎನ್.ಜಯಪ್ರಕಾಶ್ ರೈ ಸುಳ್ಯ ಮಾರ್ಗದರ್ಶನ ನೀಡಿರುತ್ತಾರೆ.ಈತ ಸುಳ್ಯ ನಗರ ಪಂಚಾಯತ್ ಉದ್ಯೋಗಿ ಬೂಡು ಸುಧಾಕರ್ ರೈ ಮತ್ತು ಶ್ರೀಮತಿ ರಾಧಿಕಾ ಎನ್.ರೈ ದಂಪತಿಯವರ ಪುತ್ರ.ಪ್ರಸ್ತುತ ಬೆಳಗಾಂನಲ್ಲಿ ಬಿ.ಕಾಂ ಪದವಿ ವ್ಯಾಸಂಗ ಮಾಡುತ್ತಿರುವರು.

# ಸುಳ್ಯದ ಸ್ವರ್ಣಶ್ರೀ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿಯಲ್ಲಿ ಠೇವಣಿಗೆ ವಿಶೇಷ ಬಡ್ಡಿದರ




ಸುಳ್ಯದ ರಥಬೀದಿಯ ವಿನಾಯಕ ಬಿಲ್ಡಿಂಗ್ ನ ಮೊದಲನೇ ಮಹಡಿಯಲ್ಲಿ ಕಾರ್ಯಾಚರಿಸುತ್ತಿರುವ ಸ್ವರ್ಣಶ್ರೀ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿಯು ಗ್ರಾಹಕರಿಗೆ ಬಿಗ್ ಆಫರ್ ನೀಡುತ್ತಿದೆ.

ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿರುವ ಈ ಸಂದರ್ಭದಲ್ಲಿ ಸ್ವರ್ಣಶ್ರೀ ಸೌಹಾರ್ದ ಸಹಕಾರಿ ಸಂಘವು ಮಾರ್ಚ್ ತಿಂಗಳಿನಲ್ಲಿ ಇರಿಸಲಾಗುವ ಠೇವಣಿಗಳಿಗೆ ವಿಶೇಷ ಬಡ್ಡಿದರವನ್ನು ಪ್ರಕಟಿಸಿದೆ. ಈ ಆಫರ್ ಮಾರ್ಚ್ 2 ರಿಂದ ಮಾ.14 ರವರೆಗೆ ಲಭ್ಯವಿದ್ದು ಈ ಅವಧಿಯಲ್ಲಿ ಸ್ವರ್ಣನಿಧಿ ಠೇವಣಿ (Fixed Deposit) ಗೆ ಒಂದು ವರ್ಷದ ಅವಧಿಗೆ ಹಿರಿಯ ನಾಗರಿಕರಿಗೆ 12%, ಜನಸಾಮಾನ್ಯರಿಗೆ 11.50% ಮತ್ತು ಸ್ವರ್ಣಧಾರ ಠೇವಣಿ(ಖಆ)ಗೆ ಒಂದು ವರ್ಷ ಮತ್ತು ಮೇಲ್ಪಟ್ಟು 11% ನೀಡಲಾಗುತ್ತದೆ. ಅಲ್ಲದೇ ಗ್ರಾಂ ಒಂದಕ್ಕೆ ಅತ್ಯಧಿಕ ದರದಲ್ಲಿ ಸೇವಾ ಶುಲ್ಕ ರಹಿತ ಚಿನ್ನಾಭರಣ ಈಡಿನ ಸಾಲಗಳನ್ನು ಕಡಿಮೆ ಬಡ್ಡಿ ದರದಲ್ಲಿ ನೀಡಲಾಗುತ್ತದೆ ಎಂದು ಸಂಸ್ಥೆಯ ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

# ಫೆ.14–15: ಬೆಳ್ಳಾರೆ ಬೂಡು ಶ್ರೀ ಆದಿನಾಗಬಗರಹ್ಮ ಮೊಗೇರ್ಕಳ ಹಾಗೂ ಸಪರಿವಾರ ದೈವಗಳ ನೇಮೋತ್ಸವ



ಬೆಳ್ಳಾರೆ ಗ್ರಾಮದ ಬೂಡು ಶ್ರೀ ಆದಿನಾಗಬ್ರಹ್ಮ ಮೊಗೇರ್ಕಳ ಹಾಗೂ ಸಪರಿವಾರ ದೈವಗಳ ನೇಮೋತ್ಸವವು ಫೆ.14 ಮತ್ತು 15ರಂದು ನಡೆಯಲಿದೆ.

ಫೆ.14ರಂದು ಬೆಳಿಗ್ಗೆ ಗಣಪತಿ ಹೋಮ, ಗೊನೆ ಮುಹೂರ್ತ, ಬಳಿಕ ಜಾಗದ ಪಂಜುರ್ಲಿಗೆ ತಂಬಿಲ ನಡೆಯಲಿದೆ. ಅಪರಾಹ್ನ ಗುಳಿಗ ದೈವದ ಎಣ್ಣೆ ಬೂಳ್ಯ, ಗುಳಿಗ ದೈವದ ನೇಮೋತ್ಸವ ನಡೆಯಲಿದ್ದು, ಸಂಜೆ ಶ್ರೀ ಮೊಗೇರ್ಕಳ ದೈವಗಳ ಭಂಡಾರ ತೆಗೆಯಲಾಗುವುದು. ರಾತ್ರಿ ಸಾರ್ವಜನಿಕ ಅನ್ನಸಂತರ್ಪಣೆ, ಬಳಿಕ ಶ್ರೀ ಮೊಗೇರ್ಕಳ ದೈವಗಳ ಗರಡಿ ಇಳಿಯುವುದು, ಶ್ರೀ ತನ್ನಿಮಾಣಿಗ ದೈವದ ಗರಡಿ ಇಳಿಯುವುದು., ಪ್ರಸಾದ ವಿತರಣೆ ನಡೆಯಲಿದೆ.

ಫೆ.15ರಂದು ಬೆಳಿಗ್ಗೆ ಶ್ರೀ ಸ್ವಾಮಿ ಕೊರಗಜ್ಜ ದೈವದ ನೇಮೋತ್ಸವ, ಪ್ರಸಾದ ವಿತರಣೆ, ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ ಜರುಗಲಿದೆ. ಫೆ.21ರಂದು ಶ್ರೀ ಮೊಗೇರ್ಕಳ ದೈವಗಳಿಗೆ ಬಿರಿಮಂಜಸೇವೆ, ಕೊರಗಜ್ಜನಿಗೆ ಹರಕೆಯ ಅಗೇಲು ಸೇವೆಗಳು ಹಾಗೂ ಲೆಕ್ಕಪತ್ರ ಮಂಡನೆ ನಡೆಯಲಿದೆ.

# ಕೊಡೆಂಚಿಕಾರ್ ಶ್ರೀ ಕೊರಗತನಿಯ ದೈವಸ್ಥಾನದಲ್ಲಿ ಶ್ರೀ ಕೊರಗತನಿಯ ಮತ್ತು ಗುಳಿಗ ದೈವಗಳ ನೇಮೋತ್ಸವ

## ಸೇರಿದ ಸಾವಿರಾರು ಮಂದಿ ಭಕ್ತಾದಿಗಳನ್ನು ಹರಸಿದ ಸ್ವಾಮಿ ಕೊರಗಜ್ಜ ದೈವ





ಮಂಡೆಕೋಲು ಗ್ರಾಮದ ಪೇರಾಲಿನ ಕೊಡೆಂಚಿಕಾರ್ ಶ್ರೀ ಕೊರಗತನಿಯ ದೈವಸ್ಥಾನದಲ್ಲಿ ಶ್ರೀ ಕೊರಗತನಿಯ ಮತ್ತು ಗುಳಿಗ ದೈವಗಳ ನೇಮೋತ್ಸವ ಕಾರ್ಯಕ್ರಮವು ಫೆ.28ರಂದು ರಾತ್ರಿ ಜರುಗಿತು.

ಫೆ.28ರಂದು ಬೆಳಿಗ್ಗೆ ಗಣಪತಿ ಹೋಮ ಮತ್ತು ನಾಗಪೂಜೆ, ಶನಿಪೂಜೆ, ಹೂವಿನಪೂಜೆ, ಕಲಶಸ್ನಾನ ನಡೆಯಿತು.

ಈ ಸಂದರ್ಭದಲ್ಲಿ ಪೇರಾಲು – ಅಂಬ್ರೋಟಿ ಶ್ರೀರಾಮ ಭಜನಾ ಮಂದಿರ, ಅಜ್ಜಾವರ ಶ್ರೀ ವರಮಹಾಲಕ್ಷ್ಮಿ ಪೂಜಾ ಸಮಿತಿ ಸದಸ್ಯರು, ಸುಳ್ಯ ಶ್ರೀ ಚೆನ್ನಕೇಶವ ಮಹಿಳಾ ಭಜನಾ ಸಮಿತಿ, ಸುಳ್ಯಪದವು ಪಡುಮಲೆಯ ಸರ್ವಶಕ್ತಿ ಮಹಿಳಾ ಭಜನಾ ಸಂಘ, ಅಜ್ಜಾವರ ವಿಶ್ವಹಿಂದೂ ಪರಿಷತ್ ಮಾತೃಶ್ರೀ ಸಂಘ ಹಾಗೂ ದೊಡ್ಡೇರಿ ಶ್ರೀ ವನದುರ್ಗಾ ಭಜನಾ ಮಂದಿರದ ಸದಸ್ಯರುಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು.

ಅಪರಾಹ್ನ ಗುಳಿಗ ದೈವದ ಕೋಲ, ಪ್ರಸಾದ ವಿತರಣೆಯಾಗಿ, ರಾತ್ರಿ ಮಹಾಪೂಜೆ, ಅನ್ನಸಂತರ್ಪಣೆ ನಡೆಯಿತು. ಬಳಿಕ ಶ್ರೀ ಕೊರಗಜ್ಜ ದೈವದ ಭಂಡಾರ ತೆಗೆದು, ಸ್ವಾಮಿ ಕೊರಗಜ್ಜ ದೈವದ ಕೋಲ ಜರುಗಿತು.

ಮಧ್ಯರಾತ್ರಿ ಶ್ರೀ ಕೊರಗತನಿಯ ದೈವಕ್ಕೆ ಹರಕೆಯ ಹೂವಾಲೆ ಹಾಕಲಾಯಿತು. ಫೆ.29ರಂದು ಪ್ರಾತಃಕಾಲ ತುಲಾಭಾರ ಸೇವೆ, ಪ್ರಸಾದ ವಿತರಣೆ ನಡೆಯಿತು.

ಈ ಸಂದರ್ಭದಲ್ಲಿ ಕೊರಗಜ್ಜ ದೈವದ ದೈವಾರಾಧಕರಾದ ಕೃಷ್ಣಪ್ಪ ಕೊಡೆಂಚಿಕಾರ್, ಬಾಬು ಕೆ. ಕೊಡೆಂಚಿಕಾರ್ ಸೇರಿದಂತೆ ಊರ –ಪರವೂರ ಸಾವಿರಾರು ಮಂದಿ ಭಕ್ತಾದಿಗಳು ಉಪಸ್ಥಿತರಿದ್ದರು. ಫೆ.14ರಂದು ಸಂಕ್ರಮಣದ ಪ್ರಯುಕ್ತ ಸ್ವಾಮಿ ಕೊರಗಜ್ಜ ದೈವದ ಹರಕೆಯ ಕೋಲ ನೆರವೇರಲಿದೆ.

# ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರಿಂದ ಕುಕ್ಕೆ ಕ್ಷೇತ್ರದಲ್ಲಿ ಆಶ್ಲೇಷ ಬಲಿ ಹಾಗೂ ತುಲಾಭಾರ ಸೇವೆ

## ಸುಳ್ಯ ತಾಲೂಕು ಜೆಡಿಎಸ್ ಘಟಕದಿಂದ ಸ್ವಾಗತ




ಕುಕ್ಕೆ ಸುಬ್ರಹ್ಮಣ್ಯಕ್ಕೆ ಭೇಟಿ ನೀಡಿದ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ ದೇವೇಗೌಡರನ್ನು ಶಾಸಕಿ ಭಾಗೀರಥಿ ಮುರುಳ್ಯ ಅವರು ಭೇಟಿಯಾಗಿ ಮಾತುಕತೆ ನಡೆಸಿದರು

ಸುಬ್ರಹ್ಮಣ್ಯ : ಭಾರತ ಸರ್ಕಾರದ ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ ದೇವೇಗೌಡರು ಮಾ.2ರಂದು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆಶ್ಲೇಷ ಬಲಿ ಮತ್ತು ತುಲಾಭಾರ ಸೇವೆ ನೆರವೇರಿಸಿದರು. ಮುಂಜಾನೆ ಶ್ರೀ ದೇವಳಕ್ಕೆ ಆಗಮಿಸಿದ ಅವರು ಸಂಕಲ್ಪ ನೆರವೇರಿಸಿ ಆಶ್ಲೇಷ ಬಲಿ ಸಮರ್ಪಿಸಿ ಪ್ರಸಾದ ಸ್ವೀಕರಿಸಿದರು. ಬಳಿಕ ಶ್ರೀ ದೇವರ ದರುಶನ ಮಾಡಿದರು. ನಂತರ ಹೊರಾಂಗಣದಲ್ಲಿ ಶ್ರೀ ದೇವರ ಮುಂಭಾಗದಲ್ಲಿ ತುಲಾಭಾರ ಸೇವೆ ನೆರವೇರಿಸಿದರು. ಬಳಿಕ ದೇವಳದ ಅರ್ಚಕರಾದ ರಮೇಶ್ ನೂರಿತ್ತಾಯರು ಮಾಜಿ ಪ್ರಧಾನಿಗಳಿಗೆ ಶಾಲು ಹೊದಿಸಿ ಮಹಾಪ್ರಸಾದ ನೀಡಿದರು. ನಂತರ ಅವರು ಹೊಸಳಿಗಮ್ಮನ ದರುಶನ ಪಡೆದು ಪ್ರಸಾದ ಸ್ವೀಕರಿಸಿದರು. ಬಳಿಕ ಶ್ರೀ ದೇವರ ಪ್ರಸಾದ ಬೋಜನ ಸ್ವೀಕರಿಸಿದರು.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ದೇವರ ದರ್ಶನ ಹಾಗೂ ತುಲಾಭಾರ ಸೇವೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ದೇವೇಗೌಡರು ನನ್ನ ಜಾತಕದಲ್ಲಿ ಪ್ರತೀ ತಿಂಗಳು ಸುಬ್ರಹ್ಮಣ್ಯ ದೇವರಿಗೆ ಆಶ್ಲೇಷ ಬಲಿ ಸೇವೆ ಮಾಡಬೇಕೆಂದಿದೆ. ಆದ್ದರಿಂದ ಸುಳ್ಯದ ಜೆಡಿಎಸ್ ಮುಖಂಡ ಎಂ.ಬಿ.ಸದಾಶಿವರು ತಿಂಗಳು ತಿಂಗಳು ಸುಬ್ರಹ್ಮಣ್ಯನಿಗೆ ಆಶ್ಲೇಷ ಬಲಿ ಪೂಜೆ ಮಾಡಿಸಿ ಪ್ರಸಾದವನ್ನು ನನಗೆ ಕಳುಹಿಸಿ ಕೊಡುತ್ತಿದ್ದಾರೆ. ನನಗೆ ಸಾಧ್ಯವಾದಗ ನಾನೂ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ದೇವರ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ ಎಂದ ದೇವೇಗೌಡರು ಕೇಂದ್ರದಲ್ಲಿ ನರೇಂದ್ರ ಮೋದಿಯವರ ಆಡಳಿತ ಉತ್ತಮವಾಗಿದೆ. ಜೆಡಿಎಸ್ ಪಕ್ಷವು ಎನ್‌ಡಿಎ ಮಿತ್ರ ಪಕ್ಷವಾಗಿ ಮುಂದುವರಿಯಲಿದ್ದು ಮುಂದಿನ ಚುನಾವಣೆಗಳಲ್ಲಿ ಜೊತೆಯಾಗಿ ಸಾಗಲಿದ್ದೇವೆ ಎಂದು ಹೇಳಿದರು.

ಶಾಸಕಿ ಭಾಗೀರಥಿ ಮುರುಳ್ಯ ಅವರು ಕುಕ್ಕೆ ಸುಬ್ರಹ್ಮಣ್ಯದಲ್ಲಿ ದೇವೇ ಗೌಡರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಎಸ್.ಎನ್.ಮನ್ಮಥ, ಬಾಲಕೃಷ್ಣ ಕೀಲಾಡಿ, ಸಂತೋಷ್ ಜಾಕೆ ಉಪಸ್ಥಿತರಿದ್ದರು.

ಸುಳ್ಯ ತಾಲೂಕು ಜಾತ್ಯಾತೀತ ಜನತಾದಳದ ವತಿಯಿಂದ ಮಾಜಿ ಪ್ರಧಾನಿ ದೇವೇಗೌಡರನ್ನು ಸ್ವಾಗತಿಸಿ ಜೆಡಿಎಸ್ ಮುಖಂಡರು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಸುಳ್ಯ ತಾಲೂಕು ಜಾತ್ಯಾತೀತ ಜನತಾದಳದ ಅಧ್ಯಕ್ಷ ಸುಕುಮಾರ ಕೊಡ್ತುಗುಳಿ, ಉಪಾಧ್ಯಕ್ಷ ದೇವರಾಮ ಬಾಳೆಕಜೆ, ಜಿಲ್ಲಾ ವಿದ್ಯಾರ್ಥಿ ಜನತಾದಳ ಘಟಕದ ಅಧ್ಯಕ್ಷ ನಿಹಾಲ್ ಎಸ್ ಕೋಡ್ತುಗುಳಿ ಸೇರಿದಂತೆ ಸುಳ್ಯ ಮತ್ತು ಕಡಬದ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಹರೀಶ್. ಎಸ್ ಇಂಜಾಡಿ, ಕಾರ್ಯನಿರ್ವಹಣಾಧಿಕಾರಿಗಳಾದ ಅರವಿಂದ ಅಯ್ಯಪ್ಪ ಸುತಗುಂಡಿ, ಎಇಒ ಎಸ್.ಜೆ.ವೈ.ರಾಜ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ದೇವಳದ ಅಧೀಕ್ಷಕರಾದ ಕೆ.ಎಂ.ಗೋಪಿನಾಥ್, ಶಿಷ್ಟಾಚಾರ ಅಧಿಕಾರಿಗಳಾದ ಜಯರಾಮ ರಾವ್, ಶಿಷ್ಟಾಚಾರ ವಿಭಾಗದ ಶ್ರೀಮಂತ ಜೋಳದಪ್ಪಗೆ, ನೇಮಿರಾಜ್, ಜೆಡಿಎಸ್ ಜಿಲ್ಲಾಧ್ಯಕ್ಷರಾದ ಜಾಕೆ ಮಾಧವ ಗೌಡ, ರಾಜ್ಯವಕ್ತಾರರಾದ ಎಂ.ಬಿ. ಸದಾಶಿವ, ಯುವ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಅಕ್ಷಿತ್ ಸುವರ್ಣ, ಪ್ರಮುಖರಾದ ದಯಾಕರ ಆಳ್ವ, ಸಂತೋಷ್ ಜಾಕೆ, ಸಯ್ಯದ್ ಮೀರಾ ಸಾಹೇಬ್, ಕೇನ್ಯ ರವೀಂದ್ರನಾಥ ಶೆಟ್ಟಿ, ಶಶಿರಾಜ್ ಶೆಟ್ಟಿ ಮಂಗಳೂರು, ವೈದ್ಯಾಧಿಕಾರಿಗಳಾದ ಮಂಜುನಾಥ್, ಸುಳ್ಯ ವೃತ್ತ ನಿರೀಕ್ಷಕರಾದ ತಿಮ್ಮಪ್ಪ ನಾಯ್ಕ್ ಹಾಗೂ ಸುಬ್ರಹ್ಮಣ್ಯ ಠಾಣಾಧಿಕಾರಿಗಳಾದ ಆಂಜನೇಯ ರೆಡ್ಡಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ವಿನೋಬನಗರ: ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಗೀತಾ ಜ್ಞಾನ ಯಜ್ಞ

## ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಂದ ಏಕಕಾಲದಲ್ಲಿ ಭಗವದ್ಗೀತೆ ಪಠಣ



ಜಾಲ್ಸೂರು ಗ್ರಾಮದ ವಿನೋಬನಗರದ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಗೀತಾ ಜ್ಞಾನ ಯಜ್ಞ ಭಗವದ್ಗೀತೆ ಪಠಣ ಕಾರ್ಯಕ್ರಮವು ನಡೆಯಿತು.

ಬೆಳಗ್ಗೆ ಅಡ್ಕಾರು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀವರ ಪಾಂಗಣ್ಣಾಯರ ನೇತೃತ್ವದಲ್ಲಿ ಗೀತಾ ಜ್ಞಾನ ಯಜ್ಞ ಆರಂಭಗೊಂಡಿತು. ವಿದ್ಯಾಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಸೇರಿಕೊಂಡು ಈ ವೇಳೆಯಲ್ಲಿ ಭಗವದ್ಗೀತೆ ಪಠಣ ಮಾಡಿದರು.

ಗೀತಾ ಜ್ಞಾನ ಯಜ್ಞದ ಪೂರ್ಣಾಹುತಿಯಲ್ಲಿ ಎಡನೀರು ಮಠದ ಸಚ್ಚಿದಾನಂದ ಭಾರತಿ ಶ್ರೀಗಳು ಭಾಗವಹಿಸಿ, ಆಶೀರ್ವಚನ ನೀಡಿದರು.

ಗೀತಾ ಜ್ಞಾನ ಯಜ್ಞ ನೆರವೇರಿಸಿದ ಶ್ರೀವರ ಪಾಂಗಣ್ಣಾಯ ಹಾಗೂ ಭಗವದ್ಗೀತೆ ಪಠಣದ ನೇತೃತ್ವ ವಹಿಸಿದ ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಗಿರೀಶ್ ರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.

ವಿವೇಕಾನಂದ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ನ. ಸೀತಾರಾಮರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಕೋಶಾಧಿಕಾರಿ ಸುಧಾಕರ ಕಾಮತ್ ಅವರು ವಂದಿಸಿದರು. ಶಿಕ್ಷಕಿ ಪಾವನಾ ಅವರು ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕ ಡಾ. ಗೋಪಾಲ ಕೃಷ್ಣ ಭಟ್ ಕಾಟೂರು, ಸದಸ್ಯರುಗಳಾದ ಪುರುಷೋತ್ತಮ ಕಿರ್ಲಾಯ, ಶ್ಯಾಮ್ ಪ್ರಸಾದ್ ಅಡ್ಡಂತಡ್ಕ, ಶಿವಪ್ರಸಾದ್ ಉಗ್ರಾಣಿಮನೆ, ಹೇಮಂತ್ ಮಠ, ರಾಷ್ಟ್ರೋತ್ಥಾನ ಶಿಶುಮಂದಿರದ ಸಮಿತಿಯ ಅಧ್ಯಕ್ಷರಾದ ಬಾಲಕೃಷ್ಣ ಬೊಳ್ಳುರು, ಪ್ರಾಥಮಿಕ ವಿಭಾಗದ ಶಾಲಾಭಿವೃದ್ಧಿ ಸಮೀತಿಯ ಅಧ್ಯಕ್ಷರಾದ ರವಿರಾಜ್ ಗಬ್ಬಲಡ್ಕ, ಪ್ರೌಢ ವಿಭಾಗದ ಶಿಕ್ಷಕ–ರಕ್ಷಕ ಸಂಘದ ಅಧ್ಯಕ್ಷ ಅಶೋಕ ಅಡ್ಕಾರು, ಹಿರಿಯ ಉದ್ಯಮಿ ಕೃಷ್ಣ ಕಾಮತ್ ಆರಂಬೂರು ಸೇರಿದಂತೆ ವಿದ್ಯಾರ್ಥಿಗಳ ಪೋಷಕರು, ಸಹಶಿಕ್ಷಕವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕವನ

## ಕುಸಿದು ಕುಳಿತಿವೆ


ನಷ್ಟಗಳು ಕುಸಿದು ಕುಳಿತಿವೆ ಇಲ್ಲಿ
ಬದುಕು ಜಾರುವುದೆಲ್ಲಿ?
ನಿನಗೆ ಬೇಕು ಹೀನ ದುಷ್ಟರ ಸಂಗ
ಕವನ ಬರೆಯುವಾಗ ಆಗಬಾರದು ಭಂಗ

ದು:ಖವೇ ಬದುಕಿನ ಮೂಲವು
ಹರಡಿದೆ ನಿಕೃಷ್ಟರ ಮಹಾ ಜಾಲವು!
ನಮ್ಮ ಬದುಕು ಸುಂದರವು
ಸುಂದರ ಬಾಳು ಸುಮಧುರವು

ಖುಷಿಯೇ ಮೇಲಾಗಿ ಬರಲಿ ಇಲ್ಲಿ
ಹಸಿವು ಜಾರಿ ಹೋಗಲಿ ಅಲ್ಲಿ
ವೇಷ ಬದಲಿಸುವ ಜನರಿದ್ದಾರೆ
ಬೇಕು ಬೇಡಗಳ ಪೂರೈಸುವವರಿದ್ದಾರೆ

ಎಷ್ಟು ದಿನವು ಈ ಕಷ್ಟಗಳ ಕೂಪ
ತಟ್ಟಿದೆಯೇ ಆ ದೇವರುಗಳ ಶಾಪ?
ಕಸಿವಿಸಿಯಾಗದಿರಲಿ ಈ ದಿವಸದಿ!
ರೀತಿಗೆ ಬರುವೆ ಈ ಕವನದಿ!?

ಮನಸ್ಸು ತುಂಬಲಿ ಈ ಬದುಕಲ್ಲಿ
ಸ್ಪಂದಿಸದವರನ್ನು ದೂರ ತಳ್ಳಿ
ಜಾಗತಿಕವಾಗಿ ದಿಕ್ಕಾಪಾಲಾಗದಿರಲಿ
ಬವಣೆಗಳು ಕಷ್ಟಗಳ ಮರೆಮಾಚಲಿ



ಎಂ.ಎ.ಮುಸ್ತಫಾ ಬೆಳ್ಳಾರೆ
7259153922

# ಕುಕ್ಕೆಯಲ್ಲೊಂದು ಕುಮಾರಧಾರೆ



ಪ್ರಕೃತಿದತ್ತವಾದ ಕುಮಾರ ಪರ್ವತದ ತಪ್ಪಲಿನಿಂದ ಸುಬ್ರಹ್ಮಣ್ಯನ ಮಡಿಲಲ್ಲಿ ಧಾರೆಯಾಗುವ ನದಿಯೇ ಕುಮಾರಧಾರೆ. ಮೇಲಿನಿಂದ ಹರಿದು ಬರುವುದರಿಂದ ಧಾರೆ ಎಂದಾಗಿದ್ದು ಜನರ ಬಾಯಲ್ಲಿ ಕುಮಾರಧಾರವಾಗಿದೆ. ಈ ನದಿಯು ಪುಣ್ಯತೀರ್ಥವಾಗಿ ಸದಾ ಹರಿಯುತ್ತಿದೆ. ಕುಮಾರ ಧಾರೆಯಲ್ಲಿ ಮಿಂದು, ಕುಕ್ಕೆಯಲ್ಲಿ ಉಂಡು ಜೀವನ ಪಾವನಗೊಳಿಸಿಕೊಂಡೆವು ಎಂಬುದು ಭಕ್ತಾದಿಗಳ ಮಾತಾಗಿದೆ.

ಈ ನದಿಗೆ ಅದರದೇ ಆದ ಮಹತ್ವವಿದೆ. ಸುಬ್ರಹ್ಮಣ್ಯನು ತಾರಕಾಸುರನನ್ನು ನಿಗ್ರಹಿಸಿ ತನ್ನ ಆಯುಧವನ್ನು ಈ ತೀರ್ಥದಲ್ಲಿ ತೊಳೆದನು ಎಂಬ ಪುರಾಣ ಕಥೆ, ಈ ತೀರ್ಥದಲ್ಲಿ ಸ್ನಾನ ಮಾಡಿದರೆ ರೋಗ ರುಜಿನ ನಿವಾರಣೆಯಾಗುತ್ತದೆ ಎಂಬ ಧಾರ್ಮಿಕ ನಂಬಿಕೆ ಇದ್ದರೆ, ಅಗಣಿತ ಗಿಡಮೂಲಿಕೆಗಳಿರುವ ಪರ್ವತದ ಮೂಲದಿಂದ ಇಳಿದು ಬರುವ ನೀರಿನಲ್ಲಿ ಔಷಧಿಯ ಗುಣ ಹೊಂದಿರುವುದರಿಂದ ಚರ್ಮರೋಗವು ನಿವಾರಣೆಯಾಗುತ್ತದೆ ಎಂಬ ವೈಜ್ಞಾನಿಕ ಕಾರಣಗಳು ಇವೆ ಇಂತಹ ಕುಮಾರ ಧಾರೆಯ ನದಿ ಪುಣ್ಯತೀರ್ಥದ ಬದಲಾಗಿ ಮಾಲಿನ್ಯದ ಆತಂಕದಲ್ಲಿದೆ. ನದಿಗಳನ್ನು ನಾವುಳಿಸಿದರೆ, ಭವಿಷ್ಯದಲ್ಲಿ ನದಿಗಳು ನಮ್ಮನ್ನು ಉಳಿಸುತ್ತದೆ ಎಂಬ ಮಾತಿದೆ. ಈ ನದಿ ಕೇವಲ ನೀರಲ್ಲ ಮೂಲಗಳಲ್ಲಿ ಅವು ನಮ್ಮ ಸಂಸ್ಕೃತಿಯು ಪ್ರತಿಬಿಂಬವಾಗಿ, ಹಲವು ಜನರ ಜೀವನದ ಅವಿಭಾಜ್ಯ ಅಂಗವಾಗಿದೆ. ಇಂತಹ ನದಿಯಲ್ಲಿ ಕ್ಷೇತ್ರಕ್ಕೆ ಬಂದ ಭಕ್ತಾದಿಗಳು ತೀರ್ಥ ಸ್ನಾನ ಮಾಡಲು ಧರಿಸಿಕೊಂಡ ಬಟ್ಟೆಗಳೊಂದಿಗೆ ಒಳ ಉಡುಪು ಸಮೇತ ಮಹಿಳೆ ಪುರುಷರೆನ್ನದೇ ನದಿಯೊಳಗೆ ಎಸೆಯುತ್ತಾರೆ ಇದು ಎಷ್ಟರ ಮಟ್ಟಿಗೆ ಸಮಂಜಸವೊ ತಿಳಿಯದು? ಇದಲ್ಲದೆ ಪ್ಲಾಸ್ಟಿಕ್,ತ್ಯಾಜ್ಯಗಳನ್ನು ನೀರಿನಲ್ಲಿ ಬಿಸಾಡಿ ನಿರ್ಲಕ್ಷವನ್ನು ತೋರುವುದರಿಂದ ಕಲುಷಿತಗೊಳ್ಳುವ ಸ್ಥಿತಿಯಲ್ಲಿದೆ. ಜನರ ಅನುಕೂಲಕ್ಕಾಗಿ ದೇವಾಲಯ ಮತ್ತು ಗ್ರಾಮ ಪಂಚಾಯತ್ ಭಕ್ತರು ಬಳಸಿದ ವಸ್ತುಗಳನ್ನು ಎಸೆಯಲು ಕಸದ ತೊಟ್ಟಿ ವ್ಯವಸ್ಥೆಯನ್ನು ಮಾಡಿರುತ್ತದೆ ಇವುಗಳನ್ನು ಬಳಸಿಕೊಳ್ಳದೆ ಮನುಷ್ಯರು ಅಲಕ್ಷ್ಯತನ ತೋರಿಸುತ್ತಿದ್ದಾರೆ. ಹೀಗಾದರೆ ಮುಂದೊಂದು ದಿನ ಪವಿತ್ರಧಾರೆಯಾ ಅಪವಿತ್ರ ಕಥೆಯಾಗಬಹುದು. ನದಿ ನಮ್ಮದಾದರೆ ಸ್ವಚ್ಛತೆ ನಮ್ಮ ಕರ್ತವ್ಯ ಹೌದು ಆದರೆ ಅದು ಹದಗೆಡದೆ ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇದರ ಸಂರಕ್ಷಣೆ ಕೇವಲ ಒಬ್ಬರಿಬ್ಬರಿಂದ ಸಾಧ್ಯವಿಲ್ಲ. ಸುಬ್ರಹ್ಮಣ್ಯ ಪರಿಸರದ ಹಲವಾರು ಸಂಘ ಸಂಸ್ಥೆಗಳು ಸ್ವಚ್ಛತಾ ಕಾರ್ಯದಲ್ಲಿ ತೊಡಗಿ ಕೊಳ್ಳುತ್ತಾರೆ ಆದರೆ ಸಾವಿರಾರು ಭಕ್ತರು ಪ್ರತಿನಿತ್ಯ ಕ್ಷೇತ್ರಕ್ಕೆ ಬರುವುದರಿಂದ ಇದು ಕಷ್ಟ ಸಾಧ್ಯವಾದ ಕೆಲಸವಾಗಿದೆ ಇದಲ್ಲದೆ ಕೇವಲ ಸಂಘ–ಸಂಸ್ಥೆಗಳು ಸ್ವಚ್ಛಗೊಳಿಸುವುದೇ ಇದಕ್ಕೆ ಪರಿಹಾರವಲ್ಲ. ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಭಕ್ತಾದಿಗಳು ಷಣ್ಮುಖನಿಗೆ ಸಲ್ಲಿಸುವ ಪೂಜೆ ಶ್ರೇಷ್ಠವಾದಂತೆ ಪುಣ್ಯತೀರ್ಥವು ಮಹತ್ವದಾಗಿದೆ ಎಂಬುದರೊಂದಿಗೆ ನಂಬಿಕೆ ಮತ್ತು ನೈರ್ಮಲ್ಯ ಪ್ರಜ್ಞೆ ಜನರಲ್ಲಿ ಮೂಡಬೇಕು ಹೊರತು ಸ್ವಚ್ಛತಾ ಕಾರ್ಯಕ್ರಮ ಮಾಡುವುದಲ್ಲ, ಇದಕ್ಕಾಗಿ ಪರ ಊರಿಂದ ಬರುವ ಭಕ್ತಾದಿಗಳಿಗೆ ಶ್ರೀ ಕ್ಷೇತ್ರದ ಸ್ವಚ್ಛತೆಯ ಬಗ್ಗೆ ಗಮನ ಸೆಳೆಯುವಂತಹ ಫಲಕಗಳನ್ನು ಅಗತ್ಯ ಸ್ಥಳಗಳಲ್ಲಿ ನೆಡುವ ಮತ್ತು ನದಿಯ ವಿಶೇಷತೆಯನ್ನು ಸಮೂಹ ಮಾಧ್ಯಮಗಳ ಮೂಲಕ ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಬೇಕು. ಕ್ಷೇತ್ರದ ಪವಿತ್ರತೆ ಕಾಪಾಡುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಬೇಕು. ನೀರು ಪವಿತ್ರ, ನದಿ ಅಮೂಲ್ಯ ಹಾಗಾಗಿ ನಾವೆಲ್ಲರೂ ಸೇರಿ ಪುಣ್ಯತೀರ್ಥವನ್ನು ಸಂರಕ್ಷಿಸೋಣ.



ಸುಮಿತ್ರ ಅರಂಪಾಡಿ
ಕನ್ನಡ ಉಪನ್ಯಾಸಕಿ
ಕೆ ಎಸ್ ಎಸ್ ಕಾಲೇಜು
ಸುಬ್ರಹ್ಮಣ್ಯ

# ರಾಜ್ಯ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ 2025ರ ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಘೋಷಣೆ

ಕರ್ನಾಟಕ ರಾಜ್ಯ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು 2025ನೇ ಸಾಲಿನ ಗೌರವ ಪ್ರಶಸ್ತಿಯನ್ನು ಘೋಷಿಸಿದ್ದು ಮಾ. 14ರಂದು ಮಂಗಳೂರಿನ ಊರ್ವ ಸ್ಟೋರ್ ಸಮೀಪದಲ್ಲಿರುವ ಅಂಬೇಡ್ಕರ್ ಭವನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ಪ್ರಶಸ್ತಿಯು ರೂ. 50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ ಎಂದು ಅಕಾಡೆಮಿ ಅಧ್ಯಕ್ಷರಾದ ಸದಾನಂದ ಮಾವಜಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಂತರಾಜ ಗೌಡ, ದ.ಕ.ಜಿಲ್ಲೆ, ಪುತ್ತೂರು–ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರ, ಶ್ರೀಮತಿ ಲೋಕೇಶ್ವರಿ ವಿನಯಚಂದ್ರ, ದ.ಕ ಜಿಲ್ಲೆ, ಬೆಳ್ತಂಗಡಿ–ಅರಬಾಷಿಕ ಸಂಘಟನಾ ಕ್ಷೇತ್ರ ಮತ್ತು ಶ್ರೀಮತಿ ಕಟತನ ಲಲಿತ ಅಯ್ಯಣ್ಣ, ಕೊಡಗು ಜಿಲ್ಲೆ, ಮಡಿಕೇರಿ–ಅರಭಾಷೆ ಸಾಹಿತ್ಯ ಕ್ಷೇತ್ರ ಇವರುಗಳನ್ನು ಆಯ್ಕೆ ಮಾಡಲಾಗಿದೆ.


ಅನಂತರಾಜ ಗೌಡ


ಲೋಕೇಶ್ವರಿ ವಿನಯಚಂದ್ರ


ಕಟ್ರತನ ಲಲಿತಾ ಅಯ್ಯಣ್ಣ


ಸಮಾರಂಭದಲ್ಲಿ ಅಕಾಡೆಮಿ ಪ್ರಕಟಿತ ಪುಸ್ತಕಗಳ ಬಿಡುಗಡೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲಾವಿದರಿಗೆ ವಾದ್ಯ ಪರಿಕರಗಳ ವಿತರಣೆ ಹಾಗೂ ಅರೆಭಾಷೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

# ಸುಳ್ಯ ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರವರಿಗೆ ಹುಟ್ಟೂರ ಅಭಿನಂದನೆ

ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡಿರುವ ರಾಧಾಕೃಷ್ಣ ಬೊಳ್ಳೂರುರವರಿಗೆ ಅಮರ ಪಡೂರು ಗ್ರಾಮದ ಅಭಿಮಾನಿಗಳಿಂದ ಹುಟ್ಟೂರ ಅಭಿನಂದನೆ ಕಾರ್ಯಕ್ರಮ ಮಾ.1ರಂದು ಕುಕ್ಕುಜಡ್ಕ ಅಮರ ಸಭಾಭವನದಲ್ಲಿ ನಡೆಯಿತು.

ಚೊಕ್ಕಾಡಿ ಉಳ್ಳಾಕುಲು ಯಾನೆ ನಾಯ ದೈವಸ್ಥಾನದ ಅಧ್ಯಕ್ಷ ಶ್ರೀನಾಥ್ ನೆಲ್ಲಿಕುಂಜರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಕುಕ್ಕುಜಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸದಾಶಿವ ಮೂಕಮಲೆ ಉದ್ಘಾಟಿಸಿ ಮಾತನಾಡಿ ಅಮರ ಪಡ್ನೂರು ಮುಡ್ನೂರು ಗ್ರಾಮದ ಪ್ರತಿಯೊಬ್ಬರೂ ಸಹ ರಾಧಾಕೃಷ್ಣ ಬೊಳ್ಳೂರುರವರಿಂದ ಸಹಾಯ ಹಸ್ತ ಪಡೆದವರು. ಯಾವುದೇ ಪಕ್ಷ ಬೇಧವಿಲ್ಲದೆ ಕೆಲಸ ನಿರ್ವಹಿಸುವ ಚತುರ ಸಂಘಟಕ, ಅಭಿವೃದ್ಧಿಯ ಹರಿಕಾರ ರಾಧಾಕೃಷ್ಣ ಬೊಳ್ಳೂರುರವರಿಗೆ ಅಭಿನಂದನೆ ಸಲ್ಲುತ್ತಿರುವುದು ಸಂತಸದ ವಿಷಯ ಎಂದು ಶುಭ ಹಾರೈಸಿದರು.

ಅಭಿನಂದನಾ ಮಾತುಗಳನ್ನಾಡಿದ ಶಿಕ್ಷಕ, ಸಂಪನ್ಮೂಲ ವ್ಯಕ್ತಿ ಶಶಿಧರ್ ಎಂ ಜೆ ಮೋಂಟಡ್ಕ ಮಾತನಾಡಿ ಬೊಳ್ಳೂರುರವರು ಧೀನರ, ನೊಂದವರ ಕಷ್ಟಕ್ಕೆ ಸ್ಪಂದಿಸುವ ಗುಣ ಇರುವ ನಡವಳಿಕೆಯಿಂದ ಜನರ ಪ್ರೀತಿ ಗಳಿಸಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ಛಲ ಹೋರಾಟಗಳಿಂದ ಸುಧೀರ್ಘ ರಾಜಕಾರಣ ಜೀವನ ನಡೆಸಿಕೊಂಡು ಬಂದಿದ್ದಾರೆ. ತನ್ನ ಚಾಣಾಕ್ಷತನ ಬುದ್ದಿವಂತಿಕೆಯಿಂದ ಅಹೋರಾತ್ರಿ ಜನರ ಸಂಕಷ್ಟಕ್ಕೆ ಸ್ಪಂದಿಸುವ ಗುಣ



ಹೊಂದಿರುವುದರಿಂದ ಜನ ಮೆಚ್ಚುಗೆ ಪಡೆದಿದ್ದಾರೆ. ಸಹಾಯ ಎಂದರೆ ಏನು ಎಂಬುದು ಬೊಳ್ಳೂರುರವರನ್ನು ನೋಡಿ ಕಲಿಯಬೇಕು. ಅಭಿಮಾನಿಗಳ, ಹುಟ್ಟೂರ ಅಭಿಮಾನಿಗಳ ಹಾರೈಕೆಯಿಂದ ಇವರ ಜೀವನ ಉಜ್ವಲವಾಗಲಿ ಎಂದು ಹಾರೈಸಿದರು.

ಸುಳ್ಯ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ದಿನೇಶ್ ಅಂಬೇಕಲ್ಲು ಮಾತನಾಡಿ ಬ್ಲಾಕ್ ಅಧ್ಯಕ್ಷರಾಗಿ ಎರಡೂ ಗ್ರಾಮದ ಅಭಿಮಾನಿಗಳು ನಿರೀಕ್ಷೆ ಇಟ್ಟುಕೊಂಡು ಈ ಅಭಿನಂದನೆ ಕಾರ್ಯಕ್ರಮ ಆಯೋಜಿಸಿದ್ದಾರೆ. ತಮ್ಮ ಮೂಲಕ ಗ್ರಾಮದ ಅಭಿವೃದ್ಧಿಗೆ ಇನ್ನಷ್ಟು ಕೊಡುಗೆ ಬರುವಂತಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾದ ವೆಂಕಟ್ರಮಣ ಗೌಡ ಇಟ್ಟಿಗುಂಡಿ, ಅಣ್ಣಾಜಿ ಗೌಡ ಮಾತನಾಡಿ ಸಮರ್ಥ ಅನುಭವಿಯಾಗಿರುವ, ಅಸ್ತಿತ್ವ ಉಳಿಸಿಕೊಂಡಿರುವ ನಾಯಕರು ಮಾತ್ರ ಜನಪರ ಕಾರ್ಯ ಮಾಡಲು ಸಾಧ್ಯ. ಅಂತಹ ಅಪರೂಪದ ವ್ಯಕ್ತಿಯನ್ನು ನಮ್ಮ ಊರಿನ ಜನತೆ ಮರೆಯುವಂತಿಲ್ಲ ಎಂದು ಶುಭ ಹಾರೈಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಈ ಊರಿನ ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಶ್ರಮಿಸಿದ್ದೇನೆ. ಈ ಊರಿನ ಸಹೃದಯಿ ಹಿತೈಷಿಗಳ ಹಾರೈಕೆ ನನ್ನ ಮೇಲಿದೆ. ಚೊಕ್ಕಾಡಿ ಮಣ್ಣಿನ ಗುಣದಿಂದ ನನಗೆ ನಾಯಕತ್ವ ಗುಣ ಬಂದಿದೆ. ಪಕ್ಷ ಸಂಘಟನೆ ಜೊತೆಗೆ ಜನರ ಪ್ರೀತಿ ಗೆಲ್ಲುವ ಕೆಲಸ ಮಾಡುತ್ತೇನೆ. ರಾಜಕಾರಣದೊಂದಿಗೆ ಊರಿನ ಚಿಂತನೆ ಮಾಡುವ ಕೆಲಸವಾಗಬೇಕಿದೆ. ಈ ಊರಿನ ಜನತೆಯ ಪ್ರೀತಿಗೆ ಅಭಾರಿಯಾಗಿದ್ದೇನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಮರಪಡ್ನೂರು ಗ್ರಾಮ ಕಾಂಗ್ರೆಸ್ ಅಧ್ಯಕ್ಷ ರಾಮಯ್ಯ ರೈ, ಚೊಕ್ಕಾಡಿ ಉಳ್ಳಾಕುಲು ಯಾನೆ ನಾಯರ್ ದೈವಸ್ಥಾನ ವ್ಯವಸ್ಥಾಪನ ಸಮಿತಿ ಸದಸ್ಯೆ ಸರೋಜ ಯತೀಶ್ ಹಿರಿಯಡ್ಕ, ಅರೋಗ್ಯ ರಕ್ಷಾ ಸಮಿತಿ ಸದಸ್ಯ ಚಂದ್ರನ್ ಕೂಟೇಲು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಮರಮುಡ್ನೂರು ಗ್ರಾಮ ಕಾಂಗ್ರೆಸ್ ಅಧ್ಯಕ್ಷ ಹೂವಪ್ಪ ಗೌಡ ಅರ್ನೋಜಿ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿ ಯತೀಶ್ ಹಿರಿಯಡ್ಕ ವಂದಿಸಿದರು. ವಿನಯ ಸಂಕೇಶ ಕಾರ್ಯಕ್ರಮ ನಿರೂಪಿಸಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಭವಾನಿಶಂಕರ್ ಕಲ್ಮಡ್ಕ, ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಅಧ್ಯಕ್ಷ ಜಯಪ್ರಕಾಶ್ ನೆಕ್ರಪ್ಪಾಡಿ, ಅಸಂಘಟಿತ ಕಾರ್ಮಿಕರ ಘಟಕ ಅಧ್ಯಕ್ಷ ಮಂಜುನಾಥ್ ಕಂದಡ್ಕ, ಪ್ರಮುಖರಾದ ಶಿವಕುಮಾರ್ ಕಂದಡ್ಕ, ರಕ್ಷಿತ್ ದೊಡ್ಡಡ್ಕ, ಪವನ್ ಮುಂಡ್ರಾಜೆ, ಸತ್ಯಪ್ರಸಾದ್ ಪುಳಿಮಾರಡ್ಕ, ಹರೀಶ್ ಕುಕ್ಕುಜಡ್ಕ, ಹರ್ಷವರ್ಧನ್ ಬೊಳ್ಳೂರು, ರವಿ ಪೂಜಾರಿ ಸೇರಿದಂತೆ ಅಮರ ಮುಳ್ಳೂರು – ಪಡೂರು ಗ್ರಾಮದ ನೂರಾರು ಅಭಿಮಾನಿಗಳು ಹಿತೈಷಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ಉಬರಡ್ಕ ಮಿತ್ತೂರು ಶ್ರೀ ನರಸಿಂಹ ಶಾಸ್ತಾವು ದೇವಸ್ಥಾನದಲ್ಲಿ ಭಕ್ತಿಸಡಗರದ ವರ್ಷಾವಧಿ ಜಾತ್ರೋತ್ಸವ

## ಧಾರ್ಮಿಕ ಸಭಾ ಕಾರ್ಯಕ್ರಮ–ಆನ್‌ಮಗೆ ನಾಟಕ ಪ್ರದರ್ಶನ

ಉಬರಡ್ಕ ಮಿತ್ತೂರಿನ ಶ್ರೀ ನರಸಿಂಹ ಶಾಸ್ತಾವು ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೋತ್ಸವವು ಬ್ರಹ್ಮಶ್ರೀ ವೇದಮೂರ್ತಿ ನೀಲೇಶ್ವರ ಉಚ್ಚಿಲತ್ತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಭಕ್ತಿ ಸಡಗರದೊಂದಿಗೆ ಜರುಗಿತು.

ಮಾ.4 ರಂದು ಬೆಳಿಗ್ಗೆ ತೋರಣ ಮುಹೂರ್ತ ಮತ್ತು ಉಗ್ರಾಣ ಪೂಜೆ, ಹಸಿರುವಾಣಿ ಸಮರ್ಪಣೆ, ಶ್ರೀ ಬೆಳರಂಪಾಡಿ ವನಶಾಸ್ತಾವು ಕ್ಷೇತ್ರದಲ್ಲಿ ಸಾನಿಧ್ಯ ಕಲಶ ಮತ್ತು ಪಂಚಗವ್ಯ, ವಿಶೇಷ ಪೂಜೆ, ಶ್ರೀ ಶಾಸ್ತಾವು ಕ್ಷೇತ್ರದ ನಾಗನ ಕಟ್ಟೆ ಮತ್ತು ಬೆಟ್ಟತೋಟದ ಚಿತ್ರಕೂಟದಲ್ಲಿ ಸಾನಿಧ್ಯ, ಕಲಶ, ಪಂಚಗವ್ಯ ಮತ್ತು ತಂಬಿಲ ಸೇವೆ ನಡೆಯಿತು.

ಮಾ.5ರಂದು ಮಧ್ಯಾಹ್ನ ಮಹಾಪೂಜೆ, ಅನ್ನಪ್ರಸಾದ ನಡೆಯಿತು. ಸಂಜೆ ದೀಪಾರಾಧನೆಯಾಗಿ, ಸಾಮೂಹಿಕ ಪ್ರಾರ್ಥನೆ, ವಿವಿಧ ವೈದಿಕ ಕಾರ್ಯಕ್ರಮಗಳು, ಶ್ರೀ ಶಿವ ಸಾನಿಧ್ಯ ಮತ್ತು ಶ್ರೀ ನರಸಿಂಹ ಸಾನಿಧ್ಯ ಕಟ್ಟೆಗಳಲ್ಲಿ ಮಂಡಲ ಬರೆದು ಶಿವ ಪೂಜೆ ಮತ್ತು ನರಸಿಂಹ ದೇವರ ಪೂಜೆ, ಶ್ರೀ ದೇವಾಲಯದಲ್ಲಿ ರಾತ್ರಿ ಪೂಜೆ ನಡೆಯಿತು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಮಾ.4ರಂದು ಸಂಜೆ ಗ್ರಾಮದ ಅಂಗನವಾಡಿ ಪುಟಾಣಿಗಳಿಂದ, ಶಾಲಾ ವಿದ್ಯಾರ್ಥಿಗಳಿಂದ ಹಾಗೂ ಊರವರಿಂದ ಸಾಂಸ್ಕೃತಿಕ ವೈವಿಧ್ಯ ನಡೆಯಿತು. ರಾತ್ರಿ ನಡೆದ ದಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಜಾತ್ರೋತ್ರವ ಸಮಿತಿ ಅಧ್ಯಕ್ಷ ಪಿ.ಎಸ್‌ಗಂಗಾಧರ ಅವರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ






ಅತಿಥಿಗಳಾಗಿ ದೇವಸ್ಥಾನದ ಜೀರ್ಣೋದ್ದಾರ ಸಮಿತಿ ಗೌರವಾಧ್ಯಕ್ಷ ಶ್ರೀಮತಿ ಶಂಕರಿ ಅಮ್ಮ, ಉಬರಡ್ಕ ಮಿತ್ತೂರು ಪ್ರಾ. ಕೃ.ಪ.ಸ.ಸಂಘದ ಅಧ್ಯಕ್ಷ ಹರಿಪ್ರಸಾದ್ ಪಾನತ್ತಿಲ, ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸುರೇಶ್ ಎಂ.ಎಚ್, ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಜತ್ತಪ್ಪ ಗೌಡ ಕುತ್ಯಾಡಿ, ಜಾತ್ರೋತ್ಸವ ಸಮಿತಿಯ ಕಾರ್ಯದರ್ಶಿ ಪುನೀತ್ ಕುಮಾರ್, ಕೋಶಾಧಿಕಾರಿ ಹೇಮನಾಥ ಕೊಡಿಯಾಲಬೈಲು, ಸಂಚಾಲಕ ವಿಜಯಕುಮಾರ್ ಉಬರಡ್ಕಮಿತ್ತೂರು, ವ್ಯವಸ್ಥಾಪನ ಸಮಿತಿ ಸದಸ್ಯರುಗಳಾದ ದಿವಾಕರ ಶೆಟ್ಟುಹಿತ್ಲು, ಶಿವರಾಮ ಎಂ.ಪಿ, ಗಂಗಾಧರ ನಾಯರ್, ಶ್ರೀಮತಿ ಸರೋಜಿನಿ ಶೆಟ್ಟಿ, ಶ್ರೀಮತಿ ವಾರಿಜ ಮಂಜಿಕಾನ, ಶ್ರೀಮತಿ ಸುಮಲತಾ ಜಗದೀಶ್ ಹಾಗೂ ನಾರಾಯಣ ಎ. ಉಪಸ್ಥಿತರಿದ್ದರು. ಬಳಿಕ ಅಮ್ಮ ಕಲಾವಿದೆರ್ ಕುಡ್ಲ ಅರ್ಪಿಸುವ ತುಳು ಹಾಸ್ಯಮಯ ನಾಟಕ ಆನ್ ಮಗೆ ಪ್ರದರ್ಶನಗೊಂಡಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಜಾತ್ರೋತ್ಸವ ಸಮಿತಿ ಅಧ್ಯಕ್ಷ ಜತ್ತಪ್ಪ ಗೌಡ ಕುತ್ಯಾಡಿ, ಜಾತ್ರೋತ್ಸವ ಸಮಿತಿ ಅಧ್ಯಕ್ಷ ಪಿ.ಎಸ್. ಗಂಗಾಧರ, ಗೌರವಾಧ್ಯಕ್ಷೆ ಶ್ರೀಮತಿ ಶಂಕರಿ ಅಮ್ಮ ಉಬರಡ್ಕ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸುರೇಶ್ ಅಮ್ಮೆ ಸೇರಿದಂತೆ ವ್ಯವಸ್ಥಾಪನ ಸಮಿತಿ ಸದಸ್ಯರುಗಳು, ಜಾತ್ರೋತ್ಸವ ಸಮಿತಿ ಸದಸ್ಯರುಗಳು, ಮೂವತ್ತೊಕ್ಲು ಊರ ಸಮಸ್ತರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಮಾ.6 ರಂದು ಬೆಳಿಗ್ಗೆ ಶ್ರೀ ಗಣಪತಿ ಹವನ, ಸಾನಿಧ್ಯ ಕಲಶ, ಸಾನಿಧ್ಯ ಕಲಶಾಭಿಷೇಕ ಮಹಾಪೂಜೆ, ಶ್ರೀ ದೇವರ ಭೂತಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಮಧ್ಯಾಹ್ನ ಅನ್ನಪ್ರಸಾದ, ರಾತ್ರಿ ಅಲಂಕಾರ ಪೂಜೆ ಮತ್ತು ರಂಗಪೂಜೆ, ಶ್ರೀ ರಕ್ತೇಶ್ವರಿ ದೈವದ ಸಾನಿಧ್ಯದಲ್ಲಿ ದೇವಕ್ರಿಯೆಯಲ್ಲಿ ಕೋಲ ನಡಾವಳಿ ನಡೆಯಲಿದೆ.

# ಸುಳ್ಯದಲ್ಲಿ “ಗ್ಲೋಅಪ್ ಯೂನಿಸೆಕ್ಸ್ ಸಲೂನ್ ಶುಭಾರಂಭ

ಸುಳ್ಯದ ಟಿ.ಎ.ಪಿ.ಸಿ.ಎಂ. ಎಸ್. ಕಟ್ಟಡದಲ್ಲಿ ಗ್ಲೋಅಪ್ ಯೂನಿಸೆಕ್ಸ್ ಸಲೂನ್ ಮಾ.1ರಂದು ಶುಭಾರಂಭಗೊಂಡಿತು.

ಶಾಸಕಿ ಭಾಗೀರಥಿ ಮುರುಳ್ಯ ಅವರು ನೂತನ ಸಂಸ್ಥೆಯನ್ನು ಉದ್ಘಾಟಿಸಿ, ಶುಭ ಹಾರೈಸಿದರು.

ಅತಿಥಿಗಳಾಗಿ ಮಾಜಿ ಸಚಿವ ಎಸ್.ಅಂಗಾರ, ಅಕಾಡಮಿ ಆಫ್ ಲಿಬರಲ್ ಎಜ್ಯುಕೇಶನ್ ಕಾರ್ಯದರ್ಶಿ ಅಕ್ಷಯ್ ಕೆ.ಸಿ, ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷ ನಿತ್ಯಾನಂದ ಮುಂಡೋಡಿ, ರೋಟರಿ ಸುಳ್ಯ ಅಧ್ಯಕ್ಷ ಡಾ.ರಾಮಮೋಹನ್, ಸುಳ್ಯ ವರ್ತಕರ ಸಂಘದ ಗೌರವಾಧ್ಯಕ್ಷ ಪಿ.ಬಿ.ಸುಧಾಕರ ರೈ, ಜೆಸಿಐ ಸುಳ್ಯ ಸಿಟಿ ಅಧ್ಯಕ್ಷೆ ನಾಗವೇಣಿ ದಾಮೋದರ, ಸುಳ್ಯ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ.ಮುಸ್ತಫ, ಟಿ.ಎ.ಪಿ.ಸಿ.ಎಂ.ಎಸ್.ನ ವ್ಯವಸ್ಥಾಪಕ ಜಯರಾಮ ಡಿ, ವಕೀಲರ ಸಂಘ & ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಸುಕುಮಾರ ಕೋಡುಗುಳಿ, ಬಿಜೆಪಿ ಮಂಡಲ ಅಧ್ಯಕ್ಷ ವೆಂಕಟ್ ವಳಲಂಬೆ, ಕೃಷಿಕ ವಿನೋದ್ ಲಸ್ರಾದೋ, ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಜೆಸಿಐ ಸುಳ್ಯ ಪಯಸ್ವಿನಿ ಅಧ್ಯಕ್ಷೆ ಲತಾಶ್ರೀ ಸುಪ್ರಿತ್ ಮೋಟಂಡ್ಕ ಉಪಸ್ಥಿತರಿದ್ದು, ಶುಭಹಾರೈಸಿದರು.

ಬಳಿಕ ಸಂಸದ ಬ್ರಿಜೇಶ್ ಚೌಟರವರು ಕೂಡ ಗ್ಲೋಅಪ್ ಸಲೂನ್ ಗೆ ಭೇಟಿ ನೀಡಿ, ಸಂಸ್ಥೆಗೆ ಶುಭ ಹಾರೈಸಿದರು.



ಇಲ್ಲಿ ಮಹಿಳೆಯರ, ಪುರುಷರ ಹೇರ್ ಸರ್ವಿಸ್, ಹೇರ್ ಟೀಟ್‌ಮೆಂಟ್, ಹೇರ್ ಕಲರಿಂಗ್, ಸ್ಕಿನ್ ಸರ್ವಿಸ್, ಹ್ಯಾಂಡ್ & ಫೀಟ್ ಕೇರ್, ವ್ಯಾಕ್ಸಿಂಗ್, ಥೊಡ್ಡಿ0ಗ್, ಮೇಕಪ್, ರಿಲ್ಯಾಕ್ಸ್ ಮಸಾಜ್, ಸಿಗ್ನಚರ್ ಪ್ಯಾಕೇಜ್ ಕಡಿಮೆ ದರದಲ್ಲಿ ಲಭ್ಯವಿದ್ದು, ನುರಿತ ಸಿಬ್ಬಂದಿಗಳಿ0ದ ಮಾಡಲಾಗುವುದು. ಇದರೊಂದಿಗೆ ಪ್ರಾರಂಭದ ಪ್ರಯುಕ್ತ ಎಲ್ಲಾ ಸರ್ವಿಸ್ ಮೇಲೆ 10% ಹಾಗೂ ವಿದ್ಯಾರ್ಥಿಗಳಿಗೆ 20% ಡಿಸ್ಕಂಟ್ ನೀಡಲಾಗುವುದು, ಇದರೊಂದಿಗೆ ವಾರ್ಷಿಕ ಮೆಂಬರ್‌ಶಿಪ್ ಮಾಡಿಸಿದಲ್ಲಿ 10% ಸ್ಪೆಷಲ್ ಡಿಸ್ಕಂಟ್ ಸಿಗಲಿದೆ ಎಂದು” ಗ್ಲೋಅಪ್ ಮಾಲಕರು ತಿಳಿಸಿದ್ದಾರೆ.

# ಕೆ.ವಿ.ಜಿ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಕೆ.ವಿ.ಜಿ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾ.04 ರಂದು ನಡೆಯಿತು. ಎನ್‌ಎಂಸಿಯ ಆವರಣದ ಮೈದಾನದಲ್ಲಿ ಜುಂಬಾ(ಜಣಟಭಚಿ)ಶೋ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಬಳಿಕ ಸಭಾ ಕಾರ್ಯಕ್ರಮವು ಕೆ.ವಿ.ಜಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ

ಸಭಾಂಗಣದಲ್ಲಿ ನೆರವೇರಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್(ರಿ.) ಸುಳ್ಯ ಅಧ್ಯಕ್ಷರು ಡಾ ಕೆ.ವಿ ಚಿದಾನಂದ ವಹಿಸಿ ಮಾತನಾಡುತ್ತಾ “ಮಹಿಳೆ ಕುಟುಂಬದಲ್ಲಿ ಅನೇಕ ಪಾತ್ರಗಳನ್ನು ಒಂದೇ ಸಮಯದಲ್ಲಿ ಯಶಸ್ವಿಯಾಗಿ ನಿರ್ವಹಿಸುತ್ತಾಳೆ. ಮನೆಯ ಆರ್ಥಿಕ ವ್ಯವಹಾರಗಳನ್ನು ಸಮರ್ಥವಾಗಿ ನೋಡಿಕೊಳ್ಳುವುದರಿಂದ ಹಿಡಿದು, ಮಕ್ಕಳ ಶಿಕ್ಷಣ, ಹಿರಿಯರ ಆರೈಕೆ ಹಾಗೂ ದೈನಂದಿನ ವ್ಯವಸ್ಥೆಯನ್ನು ನಿರ್ವಹಿಸುವವರೆಗೆ ಎಲ್ಲಾ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುತ್ತಾಳೆ. ಆದರೂ ಅವಳ ಪರಿಶ್ರಮ ಅನೇಕ ಬಾರಿ ಗಮನಿಸದೇ ಹೋಗುತ್ತದೆ. ಆದ್ದರಿಂದ ಮಹಿಳೆಯ ಕೊಡುಗೆಯನ್ನು ಗುರುತಿಸಿ ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ” ಎಂದರು.

ಈ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್(ರಿ.) ಸುಳ್ಯ ಕಾರ್ಯದರ್ಶಿ ಡಾ. ಐಶ್ವರ್ಯ ಕೆ.ಸಿ ಕಾರ್ಯಕ್ರಮದ ಧ್ಯೇಯೋದ್ದೇಶದ ಕುರಿತು ಮಾತನಾಡಿ “ಮಹಿಳೆ ಎಂದರೆ ಕೇವಲ ಒಂದು ಸಂಬಂಧವಲ್ಲ, ಆಕೆ ಶಕ್ತಿ, ಸಹನೆ ಮತ್ತು ಸಾಧನೆಯ ಪ್ರತೀಕ.

ಇಂದಿನ ಕಾಲಘಟ್ಟದಲ್ಲಿ ಮಹಿಳೆಯರಿಗೆ ಫಿಟ್ನೆಸ್ ಮತ್ತು ಆರೋಗ್ಯ ಅತ್ಯಂತ ಮುಖ್ಯವಾಗಿದೆ. ಆರೋಗ್ಯವಾಗಿರುವ ಮಹಿಳೆ ಮಾತ್ರ ಕುಟುಂಬಕ್ಕೂ, ಸಮಾಜಕ್ಕೂ ಬಲವಾದ ಆಧಾರವಾಗಬಹುದು. ದೈನಂದಿನ ವ್ಯಾಯಾಮ, ಸಮತೋಲನ ಆಹಾರ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಅವಶ್ಯಕ. ನಮ್ಮ ದೇಹ ಮತ್ತು ಮನಸ್ಸನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಮಹಿಳೆಯ ಮೊದಲ



ಜವಾಬ್ದಾರಿ” ಎಂದರು.

ಬಳಿಕ ಅತಿಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿ ಹಾಗೂ ಭಾಷಣಕಾರರಾಗಿ ಟೋಸ್ಟ್ ಮಾಸ್ಟರ್ ಸುಮಿತ್ರಾ ಮನಮೋಹನ್ ಕುರುಂಜಿಯವರು ಬದುಕುವ ಕಲೆ ಹಾಗೂ ಪರಿಣಾಮಕಾರಿ ಸಂವಹನ ಕುರಿತು ಉಪಯುಕ್ತ ಮಾರ್ಗದರ್ಶನ ನೀಡಿದರು. ಬಳಿಕ ಅಡ್ಯನಡ್ಕ ವಾರಣಾಸಿ ಫಾರ್ಮ್ ಮಾಲೀಕರು ಹಾಗೂ ಅಡ್ಯನಡ್ಕ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಡಾ. ಅಶ್ವಿನಿ ಕೃಷ್ಣಮೂರ್ತಿ ಭಾಗವಹಿಸಿ

ಕೃಷಿ ಪದ್ಧತಿಯಲ್ಲಿ ಸಾವಯವ ಗೊಬ್ಬರದ ಬಳಕೆ ಹಾಗೂ ಅರೋಗ್ಯವಂತರಾಗಲು ಸಾವಯವ ಕೃಷಿಯ ಅಗತ್ಯತೆ ಕುರಿತು ಮಹತ್ವದ ಮಾಹಿತಿಯನ್ನು ಹಂಚಿಕೊಂಡರು.

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್(ರಿ.) ಸುಳ್ಯ ಉಪಾಧ್ಯಕ್ಷರು ಶೋಭಾ ಚಿದಾನಂದ ಹಾಗೂ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ವೇದಿಕೆಯಲ್ಲಿ ಕೆ.ವಿ.ಜಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಡೀನ್ ಡಾ ನೀಲಾಂಬಿಕೈ ನಟರಾಜನ್, ನೆಹರೂ ಮೆಮೋರಿಯಲ್ ಕಾಲೇಜಿನ ಪ್ರಾಂಶುಪಾಲರು ಡಾ ರುದ್ರ ಕುಮಾರ್ ಎಂ.ಎಂ ಹಾಗೂ ಎನ್.ಎಂ.ಪಿ.ಯು.ಸಿ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮದ ಕಾರ್ಯದರ್ಶಿ ಪ್ರಾಂಶುಪಾಲರು ಮಿಥಾಲಿ ಪಿ ರೈ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ನೆಹರೂ ಮೆಮೋರಿಯಲ್ ಕಾಲೇಜಿನ ಉಪನ್ಯಾಸಕರಾದ ಕೃತಿಕಾ ಜೆ ಆಶಯ ಗೀತೆ ಹಾಡಿದರು. ಮಿಥಾಲಿ.ಪಿ ರೈ ಸ್ವಾಗತಿಸಿದರು. ಡಾ ಅಪೂರ್ವ ದೊರೆ ಸ್ವಸ್ತ್ರೀ ವರದಿ ವಾಚಿಸಿದರು. ಡಾ ಬೀನ ರಾಣಿ ಹಾಗೂ ಸವಿತಾ.ಎ.ಡಿ ಅತಿಥಿ ಪರಿಚಯ ವಾಚಿಸಿದರು. ಡಾ ರುದ್ರಕುಮಾರ್ ಎಂ.ಎಂ ವಂದಿಸಿದರು. ಉಪನ್ಯಾಸಕಿ ಬೇಬಿ ವಿದ್ಯಾ ಪಿ.ಬಿ ನಿರೂಪಿಸಿದರು. ಸಭಾ ಕಾರ್ಯಕ್ರಮದ ಬಳಿಕ ವೈವಿಧ್ಯಮಯ ಖಾದ್ಯಗಳ ಸ್ಟಾಲ್ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಸಮೂಹ ಸಂಸ್ಥೆಗಳ ಪ್ರಾಂಶುಪಾಲರು, ವಿಭಾಗ ಮುಖ್ಯಸ್ಥರು ಪ್ರಾಧ್ಯಾಪಕರು, ಬೋಧಕ ಬೋಧಕೇತರ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಅಡಿಕೆ ತೋಟಕ್ಕೆ ಅಕ್ರಮ ಪ್ರವೇಶ ಮಾಡಿ ಅಡಕೆ ಕಳ್ಳತನ ಆರೋಪಿಗಳ ಖುಲಾಸೆ

ಕಳಂಜ ಗ್ರಾಮದ ಮುಂಡುಗಾರು ಎಂಬಲ್ಲಿನ ನಿವಾಸಿಗಳಾದ ಹರಿಯಪ್ಪ ಗೌಡ, ರಾಘವ ಮತ್ತು ಲೋಕೇಶ್ವರಿ ಎಂಬುವರು ದಿನಾಂಕ 30–12–2021 ರಂದು ಎಂ.ಸುಬ್ರಹ್ಮಣ್ಯ ಎಂಬುವವರ ಅಡಿಕೆ ತೋಟಕ್ಕೆ ಅಕ್ರಮ ಪ್ರವೇಶ ಮಾಡಿ ಅಡಿಕೆಯನ್ನು ಕದ್ದು ತೆಗೆದು ಕೊಂಡು ಹೋಗಿರುತ್ತಾರೆ ಎಂದು ಆರೋಪಿಸಿ ಎಂ.ಸುಬ್ರಮಣ್ಯ ರವರು ನೀಡಿದ ದೂರಿನ ಮೇರೆಗೆ ಬೆಳ್ಳಾರೆ ಪೋಲೀಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿದ್ದು, ಅಂದಿನ ಪೋಲೀಸ್ ಉಪನಿರೀಕ್ಷಕರಾದ ಆಂಜನೇಯ ರೆಡ್ಡಿ ಜಿ.ವಿ ಪ್ರಕರಣದ ತನಿಖೆಯನ್ನು ನಡೆಸಿ ರುಕ್ಮ ನಾಯಕ್ .ಎ ರವರು ಸುಳ್ಯ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ಈ ಪ್ರಕರಣದಲ್ಲಿ ಸುಮಾರು 10 ಸಾಕ್ಷಿದಾರರನ್ನು ವಿಚಾರಣೆ ನಡೆಸಿದ್ದು, ಆರೋಪಿಗಳು ಅಡಿಕೆ ತೋಟಕ್ಕೆ ಅಕ್ರಮ ಪ್ರವೇಶ ಮಾಡಿ ಅಡಿಕೆ ಕಳ್ಳತನ ಮಾಡಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂಬ ಕಾರಣವನ್ನು ನೀಡಿ ಸುಳ್ಯದ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾವರಾದ ಶಿವಣ್ಣ ಹೆಚ್.ಆರ್ ರವರು ದಿನಾಂಕ 25–02–2026ರಂದು ಆರೋಪಿಗಳನ್ನು ಬಿಡುಗಡೆಗೊಳಿಸಿ ತೀರ್ಪು ನೀಡಿರುತ್ತಾರೆ. ಆರೋಪಿ ಪರವಾಗಿ ಸುಳ್ಯದ ವಕೀಲರಾದ ಎಂ.ವೆಂಕಪ್ಪ ಗೌಡ, ಚಂಪಾ ವಿ. ಗೌಡ, ರಾಜೇಶ್ ಬಿ.ಜಿ ಹಾಗೂ ಶ್ಯಾಮ್ ಪ್ರಸಾದ್ ಎನ್.ಕೆ ರವರು ವಾದಿಸಿದ್ದರು.

ಅಮರ ಸುಳ್ಯ ಸುದ್ದಿ ಯುಗಾದಿ ವಿಶೇಷಾಂಕ 2026

ಅಮರ ಸುಳ್ಯ ಸುದ್ದಿ ಕನ್ನಡ ವಾರಪತ್ರಿಕೆಯು ಕಳೆದ 14 ವರ್ಷಗಳಿಂದ ಗ್ರಾಮೀಣ ಪತ್ರಿಕಾರಂಗದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ನಾಲ್ಕು ವರ್ಷದಿಂದ ಅಮರ ಸುಳ್ಯ ಸುದ್ದಿ ವೆಬ್ಸೈಟ್ ಮೂಲಕ ಸುಳ್ಯದ ಸಮಗ್ರ ಸುದ್ದಿಯನ್ನು ತಮ್ಮ ಮುಂದಿಟ್ಟು ಜನರ ಮನೆಮಾತಾಗಿದೆ. ಕಳೆದ 9 ವರ್ಷಗಳಿಂದ ದೀಪಾವಳಿ ವಿಶೇಷಾಂಕ ಮತ್ತು ಮೂರನೇ ಬಾರಿಗೆ ಯುಗಾದಿ ವಿಶೇಷಾಂಕ ಹೊರತಂದು ಜನರಿಂದ ಉತ್ತಮ ಪ್ರಶಂಸೆಗೆ ಪಾತ್ರವಾಗಿದೆ. ನಿಮ್ಮ ಪ್ರೋತ್ಸಾಹದಿಂದ ಯುಗಾದಿ ವಿಶೇಷಾಂಕ ಹೊರತರಲು ನಮ್ಮ ಬಳಗ ಮತ್ತೊಮ್ಮೆ ಸಜ್ಜಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕಥೆ, ಲೇಖನ, ಕವನಗಳನ್ನು ಕಳುಹಿಸಿ ಯುಗಾದಿಯ ಸಂಭ್ರಮದಲ್ಲಿ ತಾವುಗಳು ಪಾಲ್ಗೊಳ್ಳುವಂತೆ ವಿನಮ್ರ ವಿನಂತಿ. ಜತೆಗೆ ವಿಶೇಷಾಂಕಕ್ಕೆ ಜಾಹೀರಾತು ನೀಡಿ ಪ್ರೋತ್ಸಾಹಿಸಿ.

ನಿಮ್ಮ ಬರಹಗಳಿಗೆ ಆಹ್ವಾನ

1) ಯುಗಾದಿ ಬದಲಿಸಿದ ಹಾದಿ :– ಹಿಂದೂ ಪಂಚಾಂಗದ ಮೊದಲ ದಿನ. ವರ್ಷದ ಆದಿಯಲ್ಲಿ ನಮ್ಮ ನಿರ್ಧಾರಗಳು ಬದುಕನ್ನು ಬದಲಾಯಿಸಬಲ್ಲವು. ನಿಮ್ಮ ನಿರ್ಧಾರದಿಂದ ಬದಲಾದ ಬದುಕು

2) ಬದುಕು ಕಲಿಸಿದವರು ಅಪ್ಪ–ಅಮ್ಮ : ಜೀವನದ ಹಾದಿ ತೋರಿಸಿದ ಗುರುಗಳು. ಪ್ರತಿ ಜನ್ಮಕ್ಕೂ ಇವರಿಬ್ಬರ ಕೊಡುಗೆ ಅಪಾರ. ಹೆತ್ತ ಮಗುವನ್ನು ಸಾಕಿ ಸಲಹಲು ನಿಮ್ಮ ಪೋಷಕರು ಪಟ್ಟ ಸಾಹಸ ನೀವು ಕಂಡಂತೆ

3) ಕಥೆಯೊಂದು ಹೇಳುವೆ : ಅನುಭವ ಮತ್ತು ಅನುಭಾವದ ರಸಪಾಕದೊಳಗೆ ಹುಟ್ಟಿದ ಕಲ್ಪನಾತ್ಮಕ ಅಥವಾ ಅನುಭಾವಿ ಸ್ವಾರಸ್ಯಕರ ಸುಂದರ ಕಥೆಗಳಿಗೆ ಅವಕಾಶ

4) ನೇಗಿಲ ಯೋಗಿ : ಕೃಷಿ ಕಾರ್ಯದಲ್ಲಿ ತೊಡಗಿ ವಿಶೇಷ ಸಾಧನೆ ಮಾಡಿ ಯಶಸ್ವಿಯಾದ ಕೃಷಿಕರ ಯಶೋಗಾಥೆ ಎಲ್ಲರಿಗೂ ತಿಳಿಯಲಿ. ಪೋಟೋ ಜೊತೆಗೆ ಕೃಷಿ ಸಾಧಕರ ಸುಂದರ ಲೇಖನ ಬರೆಯಿರಿ.

5) ಸೌರಮಾನ ಯುಗಾದಿ ವಿಶೇಷತೆ : ದ.ಕ., ಉಡುಪಿ ಜಿಲ್ಲೆಯನ್ನು ಒಳಗೊಂಡ ತುಳುನಾಡಿನಲ್ಲಿ ಸೌರಮಾನ ಯುಗಾದಿಯ ವಿಶೇಷತೆಗಳೇನು

5) ಒಂದು ಕನಸಿನ ಕಥೆ :– ಎಂದೋ... ಯಾವಾಗಲೋ ನಿದ್ದೆಯಲ್ಲಿ ಬಿದ್ದ ಕನಸು ನಿಮ್ಮನ್ನು ಆಗಾಗ ಕಾಡುತ್ತಿರಬಹುದು. ಅಂತಹ ಕನಸನ್ನು ಅಕ್ಷರಗಳಲ್ಲಿ ಜೋಡಿಸಿ

6 ವಿಷು ಕಣಿಯ ಮಹತ್ವ : ಯುಗಾದಿ ವಿಷು ಕಣಿಯ ಮಹತದ್ವದ ಬಗ್ಗೆ ಅಕ್ಷರ ರೂಪ ಕೊಡಿ

7) ನಾ ಕಂಡಂತೆ ತುಳುನಾಡ ಸಂಸ್ಕೃತಿ. ನಿಮ್ಮ ಅನಿಸಿಕೆ, ಅಭಿಪ್ರಾಯವನ್ನು ಅಕ್ಷರರೂಪಕ್ಕಿಳಿಸಿ

ಇದಲ್ಲದೇ ಕವನ, ಮಿನಿಕಥೆ ಹಾಗೂ ಇತರ ಅರ್ಥಪೂರ್ಣ ಬರಹ ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ದೂರವಾಣಿ ಸಂಖ್ಯೆ, ವಿಳಾಸ ಕಡ್ಡಾಯವಾಗಿ ಕಳುಹಿಸಿ

ಲೇಖನ, ಕಥೆ ಕವನ ಕಳುಹಿಸಿ ಕೊಡಲು ಕೊನೆಯ ದಿನಾಂಕ 15.03.2026

ಅಮರ ಸುಳ್ಯ ಸುದ್ದಿ
ಕನ್ನಡ ವಾರಪತ್ರಿಕೆ ಸುಳ್ಯ
ವಿನಾಯಕ ಕಾಂಪ್ಲೆಕ್ಸ್
ರಥಬೀದಿ, ಸುಳ್ಯ
ಮೊ : 9449387044
Email :amarasuddi@gmail.com
www.amarasuddi.com



